ಸಂಪುಟ 01 | ಸಂಚಿಕೆ 220 | ಸೋಮವಾರ 13 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಕಾಶ್ಮೀರ ಹುತಾತ್ಮರ ದಿನ – 2026**
(Kashmir Martyrs' Day)
2026ರ ಜುಲೈ 13 (ಸೋಮವಾರ) ರಂದು ಕಾಶ್ಮೀರ ಹುತಾತ್ಮರ ದಿನವನ್ನು ಆಚರಿಸಲಾಗುತ್ತದೆ. ಈ ದಿನವು 1931ರ ಜುಲೈ 13ರಂದು ಶ್ರೀನಗರ ಕೇಂದ್ರ ಕಾರಾಗೃಹದ ಹೊರಗೆ ನಡೆದ ಪ್ರತಿಭಟನೆಯಲ್ಲಿ ಗುಂಡಿನ ದಾಳಿಗೆ ಬಲಿಯಾದ 22 ಜನರನ್ನು ಸ್ಮರಿಸುವ ದಿನವಾಗಿದೆ. ಈ ದಿನಕ್ಕೆ ಜಮ್ಮು ಮತ್ತು ಕಾಶ್ಮೀರದ ಇತಿಹಾಸದಲ್ಲಿ ವಿಶೇಷ ಸ್ಥಾನವಿದೆ.

**2) ಭಾನು ಜಯಂತಿ** (Bhanu Jayanti – ಸಿಕ್ಕಿಂ)
ನೇಪಾಳಿ ಭಾಷೆಯ ಆದಿಕವಿ ಭಾನು ಭಕ್ತ ಆಚಾರ್ಯ ಅವರ ಜನ್ಮದಿನದ ಅಂಗವಾಗಿ ಸಿಕ್ಕಿಂ ಹಾಗೂ ನೇಪಾಳಿ ಸಮುದಾಯದಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ.

**3) ರಾಷ್ಟ್ರೀಯ ಫ್ರೆಂಚ್ ಫ್ರೈ ದಿನ** (National French Fry Day)
ಫ್ರೆಂಚ್ ಫ್ರೈಸ್‌ಗೆ ಸಮರ್ಪಿತವಾಗಿ ಆಚರಿಸಲಾಗುವ

## ಸುಭಾಷಿತ

ನನ್ನಿಂದ ಇದು ಸಾಧ್ಯವಿಲ್ಲ ಎಂದುಕೊಳ್ಳಬೇಡಿ.
ನಾನಿದನ್ನು ಮಾಡಬಲ್ಲೆ ಎಂಬ ಆತ್ಮವಿಶ್ವಾಸವೇ
ನಿಮ್ಮನ್ನು ಮುನ್ನಡೆಸಬಲ್ಲದು.

– ಸ್ವಾಮಿ ವಿವೇಕಾನಂದ

## ರೈಲು ಪ್ರಯಾಣಿಕರೇ ಗಮನಿಸಿ! ಮೊಬೈಲ್‌ನಲ್ಲಿ ಒರಿಜಿನಲ್ ಟಿಕೆಟ್ ಇದ್ರೆ ಮಾತ್ರ ಇನ್ಮುಂದೆ ಪ್ರಯಾಣ

◆ ನೈಜ್ಯ ದೆಸೆ ನ್ಯೂಸ್



ರೈಲು ಪ್ರಯಾಣಿಕರಿಗೆ ಭಾರತೀಯ ರೈಲ್ವೆ ಹೊಸ ಸೂಚನೆ ನೀಡಿದೆ. ಡಿಜಿಟಲ್ ಅನ್‌ರಿಸರ್ವ್ಡ್ ಟಿಕೆಟ್ ಬಳಸುವವರು ಇನ್ನು ಮುಂದೆ ಟಿಕೆಟ್‌ನ ಸ್ಕ್ರೀನ್‌ಶಾಟ್ ಅಥವಾ ಫೋಟೋ ತೋರಿಸಿ ಪ್ರಯಾಣಿಸಲು ಅವಕಾಶ ಇರುವುದಿಲ್ಲ. ಮೂಲ ಡಿಜಿಟಲ್ ಟಿಕೆಟ್‌ವನ್ನೇ ಅಧಿಕೃತ ಆಯಪ್‌ನಲ್ಲಿ ಪ್ರದರ್ಶಿಸಬೇಕೆಂದು ರೈಲ್ವೆ ಸ್ಪಷ್ಟಪಡಿಸಿದೆ.ಸ್ಕ್ರೀನ್‌ಶಾಟ್ ಟಿಕೆಟ್‌ಗೆ ಮಾನ್ಯತೆ ಇಲ್ಲ ವಾಟ್ಸಾಪ್, ಟೆಲಿಗ್ರಾಂ ಅಥವಾ ಇತರೆ ಮೆಸೇಜಿಂಗ್ ಆಯಪ್‌ಗಳಲ್ಲಿ ಬಂದ ಟಿಕೆಟ್‌ನ ಸ್ಕ್ರೀನ್‌ಶಾಟ್, ಫೋಟೋ ಅಥವಾ ಕಆಈ ಪ್ರತಿಯನ್ನು ಮಾನ್ಯ ಟಿಕೆಟ್ ಎಂದು ಪರಿಗಣಿಸಲಾಗುವುದಿಲ್ಲ. ಇಂತಹ ಟಿಕೆಟ್ ತೋರಿಸಿದರೆ ನಿಯಮ ಉಲ್ಲಂಘನೆ ಎಂದು ಪರಿಗಣಿಸಿ ಕ್ರಮ ಕೈಗೊಳ್ಳಬಹುದು.ಮೂಲ ಟಿಕೆಟ್ ತೋರಿಸುವುದು ಕಡ್ಡಾಯ ಡಿಜಿಟಲ್ ಅನ್‌ರಿಸರ್ವ್ಡ್ ಟಿಕೆಟ್ ಹೊಂದಿರುವವರು ಟಿಕೆಟ್ ಬುಕ್ ಮಾಡಿದ ಅದೇ ಮೊಬೈಲ್‌ನಲ್ಲಿ, ಅಧಿಕೃತ ರೈಲ್ವೆ ಆಯಪ್ ಮೂಲಕ ಮೂಲ (Original) ಟಿಕೆಟ್‌ವನ್ನೇ ತೋ-ರಿಸಬೇಕು. ಬೇರೆ ಸಾಧನದಲ್ಲಿ ಅಥವಾ ಫಾರ್ವರ್ಡ್ ಮಾಡಿದ ಟಿಕೆಟ್‌ಗಳಿಗೆ ಅವಕಾಶ ಇರುವುದಿಲ್ಲ.ಪ್ರಯಾಣಕ್ಕೂ ಮುನ್ನವೇ ಟಿಕೆಟ್ ಬುಕ್ ಮಾಡಿ ಅನ್‌ರಿಸರ್ವ್ಡ್ ಟಿಕೆಟ್‌ಗಳನ್ನು ರೈಲು ಹೊರಡುವ ಮೊದಲೇ ಬುಕ್ ಮಾಡಬೇಕು. ರೈಲು ಹೊರಟ ನಂತರ ಖರೀದಿಸಿದ ಟಿಕೆಟ್ ಮಾನ್ಯವಾಗುವುದಿಲ್ಲ ಎಂದು ರೈಲ್ವೆ ಸ್ಪಷ್ಟಪಡಿಸಿದೆ.ರಿಸರ್ವ್ಡ್ ಟಿಕೆಟ್‌ಗೆ ಹಳೆಯ ನಿಯಮವೇ ಈ ಹೊಸ ನಿಯಮವು ಸಾಮಾನ್ಯ (Unreserved) ಡಿಜಿಟಲ್ ಟಿಕೆಟ್‌ಗಳಿಗೆ ಮಾತ್ರ ಅನ್ವಯಿಸುತ್ತದೆ. ಖಖಅಖಿಅ ಮೂಲಕ ಬುಕ್ ಮಾಡಿದ ರಿಸರ್ವ್ಡ್ ಟಿಕೆಟ್ ಹೊಂದಿರುವವರು ಅಧಿಕೃತ ಇ-ಟಿಕೆಟ್, ಖಒಖ ಹಾಗೂ ಮಾನ್ಯ ಗುರುತಿನ ಚೀಟಿಯೊಂದಿಗೆ ಎಂದಿನಂತೆ ಪ್ರಯಾಣಿಸಬಹುದು. ಜೊತೆಗೆ ಪ್ರಯಾಣದ ವೇಳೆ ಟಿಕೆಟ್ ಬುಕ್ ಮಾಡಿದ ಮೊಬೈಲ್‌ನಲ್ಲಿ ಸಾಕಷ್ಟು ಬ್ಯಾಟರಿ ಇರುವಂತೆ ನೋಡಿಕೊಳ್ಳುವಂತೆ ರೈಲ್ವೆ ಸಲಹೆ ನೀಡಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ದ್ವಾರಕನಾಥ್ ಅವರ ಒಂದು ಭವಿಷ್ಯದ ಬಗ್ಗೆ ಹೇಳಿದರೆ ದೊಡ್ಡ ಸುದ್ದಿಯಾಗಲಿದೆ: ಸಿಎಂ ಡಿ.ಕೆ ಶಿವಕುಮಾರ್

◆ ನೈಜ್ಯ ದೆಸೆ ನ್ಯೂಸ್



ಬೆಂಗಳೂರು : "ತಿರುಪತಿಯಲ್ಲಿ ನಿತ್ಯ ನಡೆಯುವ ಮೊದಲ ಆರತಿ ಕರ್ನಾಟಕದ್ದು. ಈ ಆರತಿಯನ್ನ ಕರ್ನಾಟಕದ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಇತರೇ ಗಣ್ಯರಿಗೆ ಶಿಷ್ಟಾಚಾರದ ಪ್ರಕಾರ ನೀಡುವ ಸಂಬಂಧ ರಾಜ್ಯ ಸರ್ಕಾರದಿಂದ ಆದೇಶ ಹೊರಡಿಸಲಾಗುವುದು" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಹೇಳಿದರು.ಬೆಂಗಳೂರಿನ ಬನಶಂಕರಿಯ ಆರನೇ ಹಂತದ ಲಿಂಗಧೀರನಹಳ್ಳಿಯಲ್ಲಿ ಶ್ರೀ ಷಣ್ಮುಖ ಸುಬ್ರಮಣ್ಯ ದೇಗುಲದ ಶಿಲಾನ್ಯಾಸ ನೆರವೇರಿಸಿ ಸಿಎಂ ಡಿ ಕೆ ಶಿವಕುಮಾರ್ ಅವರು ಭಾನುವಾರ ಮಾತನಾಡಿದರು."ತಿ-ರುಮಲ ವೆಂಕಟೇಶ್ವರ ದೇಗುಲದ ಒಳ ಮುಖ್ಯದ್ವಾರದ ಬಳಿ ತೆರಳಿ ಪೂಜೆ ಮಾಡಲು ರಾಜ್ಯದ ಮುಖ್ಯಮಂತ್ರಿಗಳಿಗೆ ಮಾತ್ರ ಅವಕಾಶವಿದೆ. ಈ ಆರತಿಯನ್ನು ಪ್ರತಿದಿನ ಕರ್ನಾಟಕ ಸರ್ಕಾರದ ವಿಶೇಷ ಅಧಿಕಾರಿ ಪಡೆಯುತ್ತಾರೆ. ಇನ್ನು ಮುಂದಿನ ದಿನಗಳಲ್ಲಿ, ಸಚಿವರು, ಶಾಸಕರು, ಹಿರಿಯ ಅಧಿಕಾರಿಗಳು, ನ್ಯಾಯಾಧೀಶರು ಸೇರಿದಂತೆ ಯಾರಾದರೂ ಭೇಟಿ ನೀಡಿದ್ದರೆ ಅಥವಾ ಸರ್ಕಾರ ಪರವಾಗಿ ಯಾರೇ ಹೋಗಿದ್ದರೂ ಅವರಿಗೆ ಈ ಆರತಿ ನೀಡಬೇಕು ಎನ್ನುವ ಆದೇಶ ಹೊರಡಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ" ಎಂದು ಹೇಳಿದರು."ಎಷ್ಟೋ ಮಂದಿ ಶಾಸಕರು, ಜನಪ್ರತಿನಿಧಿಗಳು ತಿರುಪತಿಗೆ ಹೋದಾಗ ದರ್ಶನ ಸಿಗದೇ ವಾಪಸ್ ಬಂದಿದ್ದಾರೆ. ಈಗ ದೇವರ ಮುಂದೆ ನಿಂತು ಆರತಿ ಪಡೆಯಲು ಅವಕಾಶ ನೀಡಲಾಗುವುದು. ಈ ರಾಜ್ಯದ ಸೇವೆ ಮಾಡುವವರಿಗೆ ದೇವರಲ್ಲಿ ಪ್ರಾರ್ಥನೆ ಮಾಡಲು ಈ ಅವಕಾಶ ಒದಗಿಸಲಾಗಿದೆ. ಇದು ನನ್ನ ಕಾಲದಲ್ಲಿ ಆಗಲಿರುವ ಮುಖ್ಯ ಘೋಷಣೆ" ಎಂದರು."ನಾನು ಜೈಲಿಗೆ ಹೋಗಿ ಬಿಡುಗಡೆಯಾಗಿ ಬಂದ ದಿನದಿಂದ ಮನೆದೇವರು ತಿರುಪತಿಗೆ ಹೋಗಿರಲಿಲ್ಲ. ಇತ್ತೀಚೆಗೆ ಭೇಟಿ ನೀಡಿದ್ದ ಸಮಯದಲ್ಲಿ ಈ ಬಗ್ಗೆ ಆಲೋಚನೆ ಮಾಡಿದೆ. ಎಸ್ ಎಂ ಕೃಷ್ಣ ಅವರು ತಿರುಪತಿಯಲ್ಲಿ ಕರ್ನಾಟಕ ಟ್ರಸ್ಟ್ ರಚಿಸಿ, ವೈಭವವಾದ ಕಟ್ಟಡ ಕಟ್ಟುವ ಉದ್ದೇಶದಿಂದ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ್ದರು. ಅಷ್ಟೊತ್ತಿಗೆ ನಮ್ಮ ಸರ್ಕಾರದ ಅವಧಿ ಮುಗಿಯಿತು. ನನ್ನನ್ನ ಮುಂದುವರೆಸದ ಕಾರಣ ಆ ಕೆಲಸ ಮಾಡಲು ಆಗಿರಲಿಲ್ಲ. ಮಹಾರಾಜರ ಕಾಲದಲ್ಲೇ ನೀಡಿದ ಏಳು ಎಕರೆ ಜಾಗ ಅಲ್ಲಿತ್ತು" ಎಂದರು.ದ್ವಾರಕನಾಥ್ ಅವರ ಒಂದು ಭವಿಷ್ಯದ ಬಗ್ಗೆ ಹೇಳಿದರೆ ದೊಡ್ಡ ಸುದ್ದಿಯಾಗಲಿದೆ"ದ್ವಾರಕನಾಥ್ ಅವರು ಸುಬ್ರಹ್ಮಣ್ಯ ದೇವಾಲಯ ಕಟ್ಟುವ ವಿಚಾರ ಹೇಳುತ್ತಲೇ ಇದ್ದರು. ನಾನು ಸಂದರ್ಭ ಬರಲಿ ಎಂದು ಹೇಳಿದ್ದೆ. ಈಗ ಸಂದರ್ಭ ಬಂದಿದೆ. ದ್ವಾರಕನಾಥ್ ಅವರು ನನಗೆ ಪೂಜ್ಯ ಗುರು ಸಮಾನರು. ಅವರ ಕುಟುಂಬ ಬಹಳ ಉತ್ತಮವಾಗಿ ಬೆಳೆಯುತ್ತಿದೆ. ದ್ವಾರಕನಾಥ್ ಅವರು ಹಿಂದೆ ಒಂದು ಭವಿಷ್ಯ ನುಡಿದಿದ್ದರು. ಅದನ್ನು ನಾನು ಇಲ್ಲಿ ಹೇಳಿದರೆ ದೊಡ್ಡ ಸುದ್ದಿಯಾಗುತ್ತದೆ" ಎಂದರು.ದೇವಾಲಯ ಎಂದರೆ ಭಕ್ತಿ, ಶಕ್ತಿ, ಸಂಸ್ಕಾರ, ಮತ್ತು ಧರ್ಮದ ನೆಲೆ. ಭಕ್ತ ಹಾಗೂ ಭಗವಂತನಿಗೆ ವ್ಯವಹಾರ ನಡೆಯುವ ಸ್ಥಳ. ಈ ದೇವಾಲಯದಲ್ಲಿ ಭಕ್ತರು ಬಂದು ಶಾಂತಿ ಪಡೆದುಕೊಳ್ಳಬೇಕು. ನಮ್ಮ ವೀರ ಗಂಗಾಧರ ಅಜ್ಜಯ್ಯ ಅವರು ಮಾನವ ಧರ್ಮಕ್ಕೆ ದೇವ ಆಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಅಂತ ಹೇಳಿ ಅವರು ಘೋಷಣೆಯನ್ನ ಮಾಡಿದ್ದಾರೆ" ಎಂದರು. "ದ್ವಾರಕಾನಾಥ ಅವರು ಸುಬ್ರಹ್ಮಣ್ಯೇಶ್ವರ ದೇವಾಲಯ ಕಟ್ಟಿದ್ದಾರೆ. ಆಗ ಅವರ ಮನೆ ದೇವರು ಮೈಲಾರೇಶ್ವರ ಅಂತ ಹೇಳಿದರು. ಆದರೆ ಧರ್ಮ ಯಾವುದಾದರೂ ತತ್ವ ಒಂದೇ. ನಾಮ ಯಾವುದಾದರೂ ದೈವ ಒಂದೇ. ಪೂಜೆ ಯಾವುದಾದರೂ ಭಕ್ತಿ ಒಂದೇ. ಕರ್ಮ ಯಾವುದಾದರೂ ನಿಷ್ಠೆ ಒಂದೇ. ದೇವರೊಬ್ಬ ನಾಮ ಹಲವು" ಎಂದರು."ದೇವರ ರೂಪ ವಿವಿಧ ರೀತಿಯಲ್ಲಿ ಇರುತ್ತದೆ. ಕಲ್ಲು, ಗೋಡೆ, ಮನುಷ್ಯ ಹೀಗೆ ಪಶುಗಳಲ್ಲಿ ದೈವ ಸ್ವೂರಪವಿದೆ. ಕಾಯಕವೇ ಕೈಲಾಸ ಎಂದು ಬಸವಣ್ಣ ಹೇಳಿದ್ದಾರೆ. ವಿಧಾನಸೌಧದ ಮೇಲೆ ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆದಿದ್ದಾರೆ" ಎಂದರು. "ಶಿವನ ಮೂರನೇ ಕಣ್ಣಿನ ತೇಜಸ್ಸಿನಿಂದ ಹುಟ್ಟಿದವನು ಸುಬ್ರಹ್ಮಣ್ಯ. ನಾವು ಯಾವುದೇ ಪೂಜೆ ಮಾಡಿದ್ರು, ಏನೇ ಮಾಡಿದರೂ ಎಷ್ಟೇ ನದಿಗಳು ಹರಿದರೂ ಕೊನೆಗೆ ಸಮುದ್ರಕ್ಕೆ ಸೇರುವುದು. ಅದೇ ರೀತಿ ಯಾವುದೇ ದೇವರಿಗೆ ಪೂಜೆ ಮಾಡಿದರೂ ಕೊನೆಗೆ ಆ ಭಗವಂತನಿಗೆ ಸೇರಲಿದೆ" ಎಂದರು."ಆ ಸುಬ್ರಹ್ಮಣ್ಯನ ಕೃಪೆ ಎಲ್ಲರ ಮೇಲಿರಲಿ. ಒಬ್ಬರಿಂದಲೇ ದೇವಸ್ಥಾನ ಕಟ್ಟಲು ಸಾಧ್ಯವಿಲ್ಲ. ಎಲ್ಲರೂ ಕೈ ಜೋಡಿಸಿದರೆ ಮಾತ್ರ ಸಾಧ್ಯ. ಇದು ಜನರ, ನಿಮ್ಮ ದೇವಾಲಯ ಆಗಬೇಕು" ಎಂದರು.ಭಕ್ತಿಯ ಅಡಿಪಾಯದ ಮೇಲೆ ದೈವ ಕೃಪೆಯ ಗೋಪುರ"ಭಕ್ತಿಯ ಅಡಿಪಾಯದ ಮೇಲೆ ದೈವ ಕೃಪೆಯ ಗೋಪುರವನ್ನ ಕಟ್ಟಲಿಕ್ಕೆ ನಾವೆಲ್ಲ ಸೇರಿದ್ದೇವೆ. ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ/ ತಸ್ಮಾಧರ್ಮೋ ನ ಹಂತವ್ಯೋ ಮಾ ನೋ ಧರ್ಮೋ ಹತೋವಧೀತ್. ಯಾರು ಧರ್ಮವನ್ನ ಕಾಪಾಡುತ್ತಾರೋ ಧರ್ಮವು ಅವರನ್ನ ಕಾಪಾಡುತ್ತದೆ. ಯಾವುದೇ ಜಾತಿಯವರು ಇರಬಹುದು ಹಿಂದೂ, ಕ್ರೈಸ್ತ, ಮುಸಲ್ಮಾನ, ಸಿಖ್, ಜೈನ ಹೀಗೆ ಅವರವರ ಧರ್ಮ, ಪದ್ಧತಿಯನ್ನ ಕಾಪಾಡಿಕೊಳ್ಳಬೇಕು. ನಾವಿದನ್ನೆಲ್ಲಾ ಸೃಷ್ಟಿ ಮಾಡಿದ್ದೇವೆ. ದೇವಸ್ಥಾನ ಮಾಡೋದು ಅವರ ಕೆಲಸ ಅಲ್ಲ. ನಿಮ್ಮ ನಮ್ಮೆಲ್ಲರ ಕೆಲಸ. ಇದನ್ನ ಬೆಳೆಸಿ ಉಳಿಸಿಕೊಳ್ಳೋಣ" ಎಂದು ಹೇಳಿದರು.ಇದು ಭಕ್ತಿಯ ಪೂಜೆ. ಇದು ನಮ್ಮ ಭೂಮಿ ಪೂಜೆ. ಇದು ನಮ್ಮ ನಾಡಿನ ಭಕ್ತಿಯ ಸಂಪ್ರದಾಯದ ಪೂಜೆ" ಎಂದರು."ನನಗೆ ಸಿ ವಿ ಶಾಸ್ತ್ರೀ ಅವರು ದ್ವಾರಕನಾಥ್ ಅವರನ್ನು ಪರಿಚಯ ಮಾಡಿಕೊಟ್ಟರು. ನನಗೆ ಮೂವತ್ತೈದು ವರ್ಷದಿಂದಲೇ ಮಾರ್ಗದರ್ಶನ ನೀಡುತ್ತಾ ಬಂದವರು. ನನ್ನ ಹಾಗೂ ಅವರ ನಡುವೆ ನಡೆದ ವ್ಯವಹಾರಗಳು, ಚಟುವಟಿಕೆಗಳು, ಅವರು ಕೊಟ್ಟಂತ ಮಾರ್ಗದರ್ಶನ ಹೀಗೆ ಎಲ್ಲಾ ಸನ್ನಿವೇಶಗಳನ್ನು ಹೇಳಿದರೆ ಒಂದು ದೊಡ್ಡ ಚರಿತ್ರೆಯ ಪುಸ್ತಕವನ್ನೇ ಬರೆಯಬಹುದು" ಎಂದರು. ಧಮ್ಕಿಗಳಿಗೆ ದ್ವಾರಕನಾಥ್ ಅವರು ಹೆದರಿಲ್ಲ "ದ್ವಾರಕನಾಥ್ ಅವರೂ ಟೀಕೆಗೆ ಒಳಗಾಗಿದ್ದಾರೆ. ಅವರ ಮೇಲೆ ಮಾಧ್ಯಮದವರೂ ದಾಳಿ ಮಾಡಿದ್ದಾರೆ. ಡಿ ಕೆ ಶಿವಕುಮಾರ್ ಪರವಾಗಿ ಮಾತನಾಡುತ್ತಿದ್ದೀರಿ ಎಂದು ಕೇಳಿದ್ದಾರೆ. ಇಪ್ಪತ್ತೈದು ವರ್ಷದಿಂದ ಬೇಕಾದಷ್ಟು ಅವ-ರಿಗೆ ಧಮ್ಕಿಗಳನ್ನ ಹಾಕ್ತಿದ್ದಾರೆ. ಆ ಧಮ್ಕಿಗಳಿಗೆ ಅವರು ಯಾವತ್ತೂ ಹೆದರಿಕೊಂಡಿಲ್ಲ. ದೇವರಾಜ ಅರಸು ಅವರು, ಎಸ್ ಎಂ ಕೃಷ್ಣ ಅವರು, ಧರ್ಮಸಿಂಗ್ ಅವರು ಅನೇಕ ಮುಖ್ಯಮಂತ್ರಿಗಳು ಅವರ ಸಲಹೆ ಪಡೆದಿದ್ದಾರೆ" ಎಂದರು."ಮಾಜಿ ಸಂಸದರ ಮಗ ನನ್ನ ಸ್ನೇಹಿತರಾದ ಸುಬ್ರಹ್ಮಣ್ಯ ಅವರ ಪತ್ನಿಗೆ ಕ್ಯಾನ್ಸರ್ ಆಗಿತ್ತು. 1993-94 ರ ಕಾಲ ಅಂ-ದು ನಾನು ನನ್ನ ಪತ್ನಿ ಅವರನ್ನು ನೋಡಲು ಹೋಗಿದ್ದೆವು. ಅಂದು ಅಷ್ಟೊಂದು ವೈದ್ಯಕೀಯ ಸವಲತ್ತು ಇರಲಿಲ್ಲ. ಅವರು ಉಳಿಯುವ ಸ್ಥಿತಿಯಲ್ಲೂ ಇರಲಿಲ್ಲ. ನಾನು ಅವರ ಆಪ್ತರಿಂದ ಹೆಣ್ಣುಮಗಳ ಹಾಗೂ ಮಕ್ಕಳ ಜಾತಕ ತರಲು ಹೇಳಿದೆ. ಅದನ್ನು ಗುರುಗಳಾದ ದ್ವಾರಕನಾಥ್ ಅವರಿಗೆ ನೀಡಿದೆ. ಅವರು ಅದನ್ನು ನೋಡಿ ಈ ಮಕ್ಕಳ ಜಾತಕದಲ್ಲಿ ತಾಯಿಯನ್ನು ಕಳೆದುಕೊಳ್ಳುವುದಿಲ್ಲ ಎಂದಿದೆ ಎಂದರು. ನಂತರ ಹೊಸದುರ್ಗದ ಬಳಿ ಇರುವ ಆಂಜನೇಯನ ದೇವಸ್ಥಾನಕ್ಕೆ ತೆರಳಿ ಪೂಜೆ ಹೋಮ ಮಾಡಿ ಸಾಕು ಎಂದರು. ಆ ಹೆಣ್ಣು ಮಗಳು ಇನ್ನೂ ಆರೋಗ್ಯವಾಗಿ ಇದ್ದಾರೆ" ಎಂದರು."ಭಕ್ತಿಯ ಮೂಲಕ ಆಧ್ಯಾತ್ಮದ ದೊಡ್ಡ ಬೀಜವನ್ನ ಬಿತ್ತುವ ಕೆಲಸ ಮಾಡಲಾಗಿದೆ. ನಿಮ್ಮೆಲ್ಲ-ರಿಗೂ ಕೂಡ ಮಂಗಳವಾಗಲಿ, ಶುಭವಾಗಲಿ, ಆರೋಗ್ಯ, ಜ್ಞಾನ, ನೆಮ್ಮದಿ ದೊರೆಯಲಿ. ಭಾರತೀ ತೀರ್ಥ ಮಹಾಸ್ವಾಮಿಗಳು ಹಾಗೂ ವಿಧುಶೇಖರ ಭಾರತೀ ತೀರ್ಥ ಸ್ವಾಮೀಗಳು ನನಗೆ ಆಶೀರ್ವಾದ ಮಾಡಿಕೊಂಡು ಬಂದಿದ್ದಾರೆ. ಈ ಪವಿತ್ರವಾದ ಸ್ಥಳದಲ್ಲಿ ಶಾಂತಿ, ನೆಮ್ಮದಿ ಜನರಿಗೆ ದೊರೆಯಲಿ" ಎಂದರು.

# ಸತತ ಎರಡನೇ ಬಾರಿ NABH ಮಾನ್ಯತೆಯತ್ತ ಸಹನಾ ಮಕ್ಕಳ ಆಸ್ಪತ್ರೆ

## ಕಲ್ಯಾಣ ಕರ್ನಾಟಕದ ಮೊದಲ ಮತ್ತು ಏಕೈಕ ಮಕ್ಕಳ ಆಸ್ಪತ್ರೆಯಾಗಿ ಮತ್ತೊಂದು ಐತಿಹಾಸಿಕ ಸಾಧನೆ

◆ ನೈಜ್ಯ ದೆಸೆ ನ್ಯೂಸ್




ಸಿಂಧನೂರು, ಜುಲೈ 12: ಮಕ್ಕಳ ಆರೋಗ್ಯ ಸೇವೆಯಲ್ಲಿ ಅತ್ಯುನ್ನತ ಗುಣಮಟ್ಟವನ್ನು ಕಾಯ್ದುಕೊಂಡು ಮುನ್ನಡೆಯುತ್ತಿರುವ ಸಿಂಧನೂರಿನ ಸಹನಾ ಮಕ್ಕಳ ಆಸ್ಪತ್ರೆ ಮತ್ತೊಂದು ಐತಿಹಾಸಿಕ ಸಾಧನೆ ಮಾಡಿದೆ. ಸಹನಾ ಮಕ್ಕಳ ಆಸ್ಪತ್ರೆಯ ಸಂಸ್ಥಾಪಕರಾದ ಡಾ. ಶಿವರಾಜ್ ಪಾಟೀಲ್ ಅವರ ದೂರದೃಷ್ಟಿ, ಬದ್ಧತೆ ಹಾಗೂ ಗುಣಮಟ್ಟದ ಆರೋಗ್ಯ ಸೇವೆಯ ಕನಸಿನ ಫಲವಾಗಿ, ಆಸ್ಪತ್ರೆಯು ಅತ್ಯಂತ ಕಠಿಣವಾದ NABH Entry Level – 2nd Edition (Tough Standards) ಮಾನದಂಡಗಳನ್ನು ಯಶಸ್ವಿಯಾಗಿ ಪೂರೈಸಿ, ಸತತ ಎರಡನೇ ಬಾರಿ ಓಂಃಊ ಮಾನ್ಯತೆಯತ್ತ ಯಶಸ್ವಿಯಾಗಿ ಹೆಜ್ಜೆ ಹಾಕಿದೆ. ಇದರೊಂದಿಗೆ ಕಲ್ಯಾಣ ಕರ್ನಾಟಕದ ಮೊದಲ ಹಾಗೂ ಏಕೈಕ ಮಕ್ಕಳ ಆಸ್ಪತ್ರೆ ಎಂಬ ಹೆಗ್ಗಳಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಿದೆ. NABH ಎರಡನೇ ಆವೃತ್ತಿಯ ಮಾನದಂಡಗಳು 10 ಅಧ್ಯಾಯಗಳು, 46 ಮಾನದಂಡಗಳು ಹಾಗೂ 189 ಉದ್ದೇಶಾತ್ಮಕ ಅಂಶಗಳನ್ನು ಒಳಗೊಂಡಿದ್ದು, ಅವುಗಳಲ್ಲಿ 124 ಕೋರ್ ಉದ್ದೇಶಗಳನ್ನು ಸಹನಾ ಮಕ್ಕಳ ಆಸ್ಪತ್ರೆ ಯಶಸ್ವಿಯಾಗಿ ಪೂರೈಸಿದೆ. ಆಸ್ಪತ್ರೆಯಲ್ಲಿ ಓಂಃಊ ಪರಿಶೀಲನಾ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಅಧಿಕೃತ ಮಾನ್ಯತಾ ಪ್ರಮಾಣಪತ್ರದ ನಿರೀಕ್ಷೆಯಲ್ಲಿದೆ. ಈ ಸಾಧನೆ ಕುರಿತು ಆಸ್ಪತ್ರೆಯ ಆಡಳಿತ ಮಂಡಳಿ ಸಂತಸ ವ್ಯಕ್ತಪಡಿಸಿದ್ದು, ವೈದ್ಯರು, ನರ್ಸಿಂಗ್ ಸಿಬ್ಬಂದಿ, ಆಡಳಿತ ವರ್ಗ ಹಾಗೂ ಪ್ರತಿಯೊಬ್ಬ ಸಹಾಯಕ ಸಿಬ್ಬಂದಿಯ ಸಮರ್ಪಿತ ಸೇವೆ ಮತ್ತು ತಂಡದ ಒಗ್ಗಟ್ಟಿನ ಪರಿಶ್ರಮವೇ ಈ ಯಶಸ್ಸಿನ ಹಿಂದಿನ ಶಕ್ತಿಯಾಗಿದೆ ಎಂದು ತಿಳಿಸಿದೆ. NABH ತಪಾಸಣೆಯ ಸವಾಲಿನ ದಿನಗಳನ್ನು 'ಲಗಾನ್' ಚಿತ್ರದ ಹೋರಾಟಕ್ಕೆ ಹೋಲಿಸಿದ ಸಿಬ್ಬಂದಿ, ಸೀಮಿತ ಸಂಪನ್ಮೂಲಗಳ ನಡುವೆಯೂ ಹಗಲು-ರಾತ್ರಿ ಶ್ರಮಿಸಿ ಈ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ ಎಂದು ಅಭಿಪ್ರಾಯಪಟ್ಟರು. ಕಳೆದ 30 ವರ್ಷಗಳಿಂದ ಡಾ. ಶಿವರಾಜ್ ಪಾಟೀಲ್ ಅವರ ನೇತೃತ್ವದಲ್ಲಿ, ಮಕ್ಕಳ ಆರೋಗ್ಯ ಸೇವೆ, ರೋಗಿಗಳ ಸುರಕ್ಷತೆ, ಸೋಂಕು ನಿಯಂತ್ರಣ ಹಾಗೂ ಗುಣಮಟ್ಟದ ಚಿಕಿತ್ಸಾ ಸೇವೆಗಳಲ್ಲಿ ಸಹನಾ ಮಕ್ಕಳ ಆಸ್ಪತ್ರೆ ನಿರಂತರವಾಗಿ ಮಾದರಿಯಾಗಿದೆ. ಇದೇ ಬದ್ಧತೆ ಮತ್ತು ಸೇವಾ ಮನೋಭಾವ ಇಂದು ರಾಷ್ಟ್ರೀಯ ಮಟ್ಟದ NABH ಮಾನ್ಯತೆಯತ್ತ ಆಸ್ಪತ್ರೆಯನ್ನು ಯಶಸ್ವಿಯಾಗಿ ಮುನ್ನಡೆಸಿದೆ. "ಕನಸು ದೊಡ್ಡದಿದ್ದರೆ, ತಂಡ ಒಗ್ಗಟ್ಟಾಗಿದ್ದರೆ ಮತ್ತು ಶ್ರಮ ಪ್ರಾಮಾಣಿಕವಾಗಿದ್ದರೆ ಯಾವುದೇ ಸವಾಲು ಅಸಾಧ್ಯವಲ್ಲ" ಎಂಬ ಸಂದೇಶವನ್ನು ತನ್ನ ಸಾಧನೆಯ ಮೂಲಕ ಸಾಬೀತುಪಡಿಸಿರುವ ಸಹನಾ ಮಕ್ಕಳ ಆಸ್ಪತ್ರೆ, ಗುಣಮಟ್ಟದ ಆರೋಗ್ಯ ಸೇವೆಯಲ್ಲಿ ಹೊಸ ಮಾನದಂಡವನ್ನು ನಿರ್ಮಿಸಿದೆ. ಈ ಐತಿಹಾಸಿಕ ಸಾಧನೆಗೆ ಕಾರಣರಾದ ಸಂಸ್ಥಾಪಕ ಡಾ. ಶಿವರಾಜ್ ಪಾಟೀಲ್, ವೈದ್ಯರು, ನರ್ಸಿಂಗ್ ಸಿಬ್ಬಂದಿ, ಆಡಳಿತ ಮಂಡಳಿ ಹಾಗೂ ಆಸ್ಪತ್ರೆಯ ಎಲ್ಲ ಸಿಬ್ಬಂದಿಗೆ ಸಾರ್ವಜನಿಕ ವಲಯದಿಂದ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದೆ.

## ಸಾಹಿತ್ಯ ಸಿಂಚನ

ಗೆಲುವು

ಗೆಲುವು ಎಂದರೆ ಗುರಿಯ ಬೆಳಕು,
ಸೋಲಿನ ಬಳಿಕದ ಹೊಸದೊಂದು ಹೆಜ್ಜೆ.
ಧೈರ್ಯವೇ ಅದರ ಮೊದಲ ಹೆಜ್ಜೆ,
ಪ್ರಯತ್ನವೇ ಅದರ ನಿಜವಾದ ಬಲ.

ಬೆವರು ಸುರಿದ ಶ್ರಮದ ಫಲ,
ನಂಬಿಕೆಯಿಂದ ಅರಳುವ ಕನಸು.
ಕಷ್ಟಗಳ ನಡುವೆ ನಿಂತ ಮನಸು,
ಕೊನೆಗೆ ಕಾಣುವುದು ವಿಜಯದ ನಗು.

ಬೀಳುವುದೇ ಅಂತ್ಯವಲ್ಲ,
ಮತ್ತೆ ಏಳುವುದೇ ಗೆಲುವಿನ ಗುಟ್ಟು.
ತಾಳ್ಮೆ, ಶಿಸ್ತು, ಪರಿಶ್ರಮ ಇದ್ದರೆ,
ಯಶಸ್ಸು ಖಂಡಿತ ನಮ್ಮ ಜೊತೆ.

ಗೆಲುವು ಹಣದಲ್ಲೇ ಇಲ್ಲ,
ಒಳ್ಳೆಯ ಗುಣದಲ್ಲಿ ಅದು ಅಡಗಿದೆ.
ಇತರರನ್ನು ಗೌರವಿಸಿ ನಡೆಯುವವನೇ,
ನಿಜವಾದ ವಿಜಯಶಾಲಿ.

ಇಂದು ಮಾಡಿದ ಸಣ್ಣ ಪ್ರಯತ್ನ,
ನಾಳೆಯ ದೊಡ್ಡ ಸಾಧನೆ ಆಗುತ್ತದೆ.
ಗೆಲುವು ಕನಸಲ್ಲ,
ಪ್ರಾಮಾಣಿಕ ಶ್ರಮದ ಸಿಹಿ ಫಲವೇ ಗೆಲುವು.

–ಶ್ರೀಮತಿ ಕವಿತಾ ಹಿರೇಮಠ್

# 16 ವರ್ಷಗಳಿಂದ ಆಶ್ರಯ ಮನೆಗಳ ಹಂಚಿಕೆ ವಿಳಂಬ : ಬಡ ಫಲಾನುಭವಿಗಳಿಗೆ ನ್ಯಾಯ ಒದಗಿಸಿ – ಏಳುರಾಗಿ ಕ್ಯಾಂಪ್ ನಿವಾಸಿಗಳ ಆಗ್ರಹ

◆ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಿಂಧನೂರು ನಗರಸಭೆ ಆಶ್ರಯ ಸಮಿತಿ ವ್ಯಾಪ್ತಿಯ ವಾರ್ಡ್ ಸಂಖ್ಯೆ□31ರ (ಸರ್ವೆ ನಂ.17) ಏಳುರಾಗಿ ಕ್ಯಾಂಪ್‌ನಲ್ಲಿ ಸರ್ಕಾರಿ ಉಚಿತ ಆಶ್ರಯ ವಸತಿ ಯೋಜನೆಯಡಿ ನಿರ್ಮಿಸಲಾದ ಮನೆಗಳನ್ನು ಕಳೆದ ಸುಮಾರು 16 ವರ್ಷಗಳಿಂದಲೂ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡದೆ ವಿಳಂಬ ಮಾಡುತ್ತಿರುವುದಾಗಿ ಸ್ಥಳೀಯ ನಿವಾಸಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಫಲಾನುಭವಿಗಳ ಹೇಳಿಕೆಯಂತೆ, ಬಡ ಹಾಗೂ ನಿರಾಶ್ರಿತ ಕುಟುಂಬಗಳಿಗಾಗಿ ನಿರ್ಮಿಸಲಾಗಿದ್ದ ಆಶ್ರಯ ಮನೆಗಳ ಕಾಮಗಾರಿ ಅರ್ಧದಲ್ಲೇ ಸ್ಥಗಿತಗೊಂಡಿದ್ದು, ಇಂದಿಗೂ ಮನೆಗಳನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗಿಲ್ಲ. ಇದರಿಂದ ನೂರಾರು ಬಡ ಕುಟುಂಬಗಳು ಸ್ವಂತ ಮನೆ ಇಲ್ಲದೆ ಬಾಡಿಗೆ ಮನೆಗಳಲ್ಲಿ ಹಾಗೂ ಸಂಕಷ್ಟದ ಪರಿಸ್ಥಿತಿಯಲ್ಲಿ ಜೀವನ ಸಾಗಿಸುತ್ತಿವೆ.ಇದೇ ವೇಳೆ ಆಶ್ರಯ ಯೋಜನೆಯ ಫಲಾನುಭವಿಗಳಿಂದ ತಲಾ □30,000 ವಂತಿಗೆ ಹಣವನ್ನು ನಗರಸಭೆ ಹಾಗೂ ಆಶ್ರಯ ಸಮಿತಿಯ ಅಧಿಕಾರಿಗಳು ಸಂಗ್ರಹಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಹಣ ಪಾವತಿಸಿ ಹಲವು ವರ್ಷಗಳು ಕಳೆದಿದ್ದರೂ ಮನೆಗಳನ್ನು ಹಂಚಿಕೆ ಮಾಡದೇ ಫಲಾನುಭವಿಗಳನ್ನು ಅಲೆದಾಡಿಸುತ್ತಿರುವುದು ಅತ್ಯಂತ ಖಂಡನೀಯ ಎಂದು ನಿವಾಸಿಗಳು ತಿಳಿಸಿದ್ದಾರೆ.



ಈ ಕುರಿತು ಸಿಂಧನೂರು ವಿಧಾನಸಭಾ ಕ್ಷೇತ್ರದ ಶಾಸಕರು, ನಗರಸಭೆ ಅಧಿಕಾರಿಗಳು ಹಾಗೂ ಆಶ್ರಯ ಸಮಿತಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಸ್ಪಂದನೆ ದೊರೆತಿಲ್ಲ ಎಂದು ಫಲಾನುಭವಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದ ಬಡ ಕುಟುಂಬಗಳು ತಮ್ಮ ಹಕ್ಕಿನ ವಸತಿಯಿಂದ ವಂಚಿತರಾಗಿವೆ ಎಂದು ದೂರಿದ್ದಾರೆ.ಆದ್ದರಿಂದ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತವು ಈ ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಿ, ಫಲಾನುಭವಿಗಳಿಂದ ಸಂಗ್ರಹಿಸಿರುವ ಹಣದ ಲೆಕ್ಕಪತ್ರವನ್ನು ಸಾರ್ವಜನಿಕರಿಗೆ ತಿಳಿಸಬೇಕು. ಜೊತೆಗೆ ವಾರ್ಡ್ ಸಂಖ್ಯೆ□31ರ ಸರ್ವೆ ನಂ.17ರ ಏಳುರಾಗಿ ಕ್ಯಾಂಪ್‌ನ ಆಶ್ರಯ ಮನೆಗಳನ್ನು ತಕ್ಷಣ ಪೂರ್ಣಗೊಳಿಸಿ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡುವ ಮೂಲಕ ಬಡವರಿಗೆ ನ್ಯಾಯ ಒದಗಿಸಬೇಕು ಎಂದು ವಾರ್ಡ್‌ನ ಗರಿಷ್ಠ ಸಂಖ್ಯೆಯ ಫಲಾನುಭವಿಗಳು ಹಾಗೂ ನಿವಾಸಿಗಳು ಒತ್ತಾಯಿಸಿದ್ದಾರೆ.



## ಜು.18ರಂದು ಉಚಿತ ಎಲುಬು, ಕೀಲು ತಪಾಸಣೆ ಶಿಬಿರ

◆ ನೈಜ್ಯ ದೆಸೆ ನ್ಯೂಸ್




ಬಳ್ಳಾರಿ / ಕಂಪ್ಲಿ: ಜು.18ರಂದು ಪಟ್ಟಣದ ಸಾಂಗಾತ್ರಯ ಸಂಸ್ಕೃತ ಪಾಠಶಾಲೆಯಲ್ಲಿ ಅಕ್ಕಮಹಾದೇವಿ ಮಹಿಳಾ ಮಂಡಳಿವತಿಯಿಂದ ಉಚಿತ ಎಲುಬು, ಕೀಲು ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಅಕ್ಕಮಹಾದೇವಿ ಮಹಿಳಾ ಮಂಡಳಿ ಅಧ್ಯಕ್ಷೆ ಡಾ.ಶಾರದಾ ಜಗನ್ನಾಥ ಹಿರೇಮಠ್ ತಿಳಿಸಿದರು. ಸ್ಥಳೀಯ ಸಾಂಗಾತ್ರಯ ಸಂಸ್ಕೃತ ಪಾಠಶಾಲೆಯ ಅಕ್ಕಮಹಾದೇವಿ ದೇವಸ್ಥಾನ ಆವರಣದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯ ಅಧ್ಯಕ್ಷತೆವಹಿಸಿ ಮಾತನಾಡಿ, ರಾಣೇಬೆನ್ನೂರಿನ ಪ್ರತಿಷ್ಠಿತ ಆಸ್ಪತ್ರೆಯ ಎಂಬಿಬಿಎಸ್ ಡಾ.ಸಂಜೀವ್ ಎಂ.ಮುದ್ರಿ ಇವರ ನೇತೃತ್ವದಲ್ಲಿ ಉಚಿತವಾಗಿ ಎಲುಬು, ಕೀಲು ಸಂಬಂಧಿಸಿದ ಕಾಯಿಲೆ ಮತ್ತು ಮೂಳೆ ಮುರಿತಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಆದ್ದರಿಂದ ಕಂಪ್ಲಿ ಸೇರಿದಂತೆ ತಾಲೂಕಿನ ಜನರು ಈ ತಪಾಸಣೆ ಶಿಬಿರದಲ್ಲಿ ಭಾಗವಹಿಸಿ, ಈ ಉಚಿತ ತಪಾಸಣೆಯ ಸದುಪಯೋಗ ಪಡೆದುಕೊಳ್ಳಬೇಕು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಮಹಿಳಾ ಸಂಘದ ಅಧ್ಯಕ್ಷೆ ಡಾ.ಶಾರದಾ ಹಿರೇಮಠ್ ಮೊ.ನಂ–9986789272, ಕಾರ್ಯದರ್ಶಿ ಟಿ.ಸುಮಂಗಲಾ ಮೊ.ನಂ–8971825142, ಪುಷ್ಪಾ ಮೊ.ನಂ–8310990272ಗೆ ಸಂಪರ್ಕಿಸಬಹುದು ಎಂದು ಹೇಳಿದರು.ಈ ಸಂದರ್ಭದಲ್ಲಿ ಕಾರ್ಯದರ್ಶಿ ಬಿ.ಸುಮಂಗಳಾ, ಉಪ ಕಾರ್ಯದರ್ಶಿ ಬಿ.ಎಂ.ಪುಷ್ಪಾ, ಸದಸ್ಯೆಯರಾದ ವಾಲಿ ಶಕುಂತಲಾ, ನಿರ್ದೇಶಕಿಯರಾದ ಉಮಾ ಕೋಟೆ, ಅರವಿ ಅನುಪಮಾ, ಟಿ.ಸುಜಾತ, ಪಾಠಶಾಲೆ ಪ್ರಾಚಾರ್ಯ ಘನಮಠಶಾಸ್ತ್ರಿ ಮುಖಂಡರಾದ ಎಸ್.ಟಿ.ಬಸವರಾಜ, ವೆಂಕಟೇಶರೆಡ್ಡಿ, ಡಾ.ಜಗನ್ನಾಥ ಹಿರೇಮಠ ಸೇರಿದಂತೆ ಅನೇಕರಿದ್ದರು.

# ಝಡ್ ಜಮೀರ್ ಅಹ್ಮದ್‌ಗೆ ಡಿಸಿಎಂ, ಶಾಸಕ ಗಣೇಶ್‌ಗೆ ಸಚಿವ ಸ್ಥಾನ ನೀಡುವಂತೆ ಡಿಎಸ್‌ಎಸ್ ಆಗ್ರಹ

◆ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಕ್ಷೇತ್ರದ ಜನರು ನಾಡಿ ಮಿಡಿತದೊಂದಿಗೆ ಜನಪರ ಸೇವೆ ಮಾಡಿಕೊಂಡು ಬಂದಿರುವ ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಇವರಿಗೆ ಸಚಿವ ಸ್ಥಾನ ಹಾಗೂ ಮಾಜಿ ಸಚಿವ ಝಡ್ ಜಮೀರ್ ಅಹ್ಮದ್ ಇವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ(ಬುದ್ಧ, ಬಸವ, ಅಂಬೇಡ್ಕರ್ ವಾದ)ಯ ಜಿಲ್ಲಾ ಉಪಾಧ್ಯಕ್ಷ ಕರಡಿ ವಲಿಸಾಬ್ ಒತ್ತಾಯಿಸಿದರು. ಅವರು ಪಟ್ಟಣದಲ್ಲಿ ಶನಿವಾರ ಪತ್ರಿಕಾ ಪ್ರಕಟಣೆ ನೀಡಿ ಮಾತನಾಡಿ, ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಪಂಚ ಗ್ಯಾರಂಟಿ ಮೂಲಕ ಜನರ ಬದುಕಿಗೆ



ಸರ್ಕಾರ ಆಸರೆಯಾಗಿದೆ. ಕಂಪ್ಲಿ ಸೇರಿದಂತೆ ರಸ್ತೆ, ಬೀದಿ ದೀಪ ಹಾಗೂ ಇನ್ನಿತರ ಅಭಿವೃದ್ಧಿ ಕಾರ್ಯಗಳೊಂದಿಗೆ ಜನರೊಂದಿಗೆ ಶಾಸಕ ಗಣೇಶ್ ಅವರು ಬೆರೆತ್ತಿದ್ದಾರೆ. ಇವರು ಅಭಿವೃದ್ಧಿ ಕಾರ್ಯಗಳು ಜನರನ್ನು ಮೆಚ್ಚಿಸಿದೆ. ಮತ್ತು ಜನನಾಯಕ ಝಡ್ ಜಮೀರ್ ಅಹ್ಮದ್ ಇವರು ವಿಜಯನಗರ(ಹೊಸಪೇಟೆ) ಜಿಲ್ಲೆ ಒಳಗೊಂಡಂತೆ ಅಖಂಡ ಬಳ್ಳಾರಿ ಜಿಲ್ಲಾ ಸಚಿವರಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯದೊಂದಿಗೆ ಸರ್ಕಾರದ ಯೋಜನೆಗಳನ್ನು ಜನತೆಗೆ ಕಲ್ಪಿಸಿದ ಶ್ರೇಯಸ್ಸು ಸಲ್ಲುತ್ತದೆ. ಮತ್ತು ಕಳೆದ ವರ್ಷದ ಮುಂಗಾರು ಹಂಗಾಮಿನಲ್ಲಿ ರೈತರ ಜೀವನಾಡಿ ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಕಟ್ ಆಗಿ ಅಪಾರ ನೀರು ಪೋಲಾಗಿತ್ತು. ಮತ್ತು ಅಪಾಯದ ಅಂಚಿನಲ್ಲಿತ್ತು. ಆದರೆ, ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದಲ್ಲಿದ್ದುಕೊಂಡು ಜಮೀರ್ ಅಹ್ಮದ್ ಅವರು ಜಲಾಶಯಕ್ಕೆ ಭೇಟಿ ನೀಡಿ, ತುರ್ತಾಗಿ ನೀರು ತಡೆಯುವ ಕ್ರಮವಹಿಸಿದ್ದರು. ಮತ್ತು ಹೊಸ ಕ್ರಸ್ಟ್ ಗೇಟ್ ಅಳವಡಿಕೆಯಲ್ಲಿ ಅವರ ಪಾತ್ರ ದೊಡ್ಡದಿದೆ. ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ವರ್ಗದ ಜನರ ಸಂಕಷ್ಟಗಳಿಗೆ ಸ್ಪಂದಿಸಿ, ಸೈ ಎನ್ನಿಸಿಕೊಂಡಿದ್ದಾರೆ. ಆದ್ದರಿಂದ ಇಂದಿನ ಸರ್ಕಾರದಲ್ಲಿ ಡಿಸಿಎಂ ಸ್ಥಾನವನ್ನು ಮಾಜಿ ಸಚಿವ ಜಮೀರ್ ಅಹ್ಮದ್ ಇವರಿಗೆ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನದಲ್ಲಿ ಕಾಂಗ್ರೆಸ್ ಪಕ್ಷ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಸಿ.ಬಸವರಾಜ, ಉಪಾಧ್ಯಕ್ಷ ಮೆಟ್ರಿ ಸೋಮಪ್ಪ, ಗೌರವಾಧ್ಯಕ್ಷ ಚಂದ್ರಶೇಖರ, ತಾಲೂಕು ಯುವ ಘಟಕ ಅಧ್ಯಕ್ಷ ಜಾಫರ್‌ಸಾಬ್, ಹಮಾಲಿ ಸಂಘದ ಗೌರವಾಧ್ಯಕ್ಷ ಬಾಲಪ್ಪ, ಮುಖಂಡ ಅಂಜಿನಪ್ಪ, ಪದಾಧಿಕಾರಿಗಳು ಇದ್ದರು.

# ಮಸ್ಕಿಯಲ್ಲಿ ಜುಲೈ 15ರಂದು ಬಣಜಿಗ ಸಮಾಜದಿಂದ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ– ವೀರೇಶಸೌದ್ರಿ

◆ ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕು ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಭ್ರಮರಾಂಬ ದೇವಸ್ಥಾನದಲ್ಲಿ ಜುಲೈ 15ರಂದು ಬೆಳಿಗ್ಗೆ 10.30ಕ್ಕೆ ಪ್ರತಿಭಾ ಪುರಸ್ಕಾರ ಹಾಗೂ ಸಮಾಜದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಬಣಜಿಗ ಸಮಾಜದ ತಾಲೂಕಾಧ್ಯಕ್ಷ ವೀರೇಶ ಸೌದ್ರಿ ಹೇಳಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ರವಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ




ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮಾಜದ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಭ್ರಮರಾಂಬ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದ್ದು, ವರರುದ್ರಮುನಿ ಶಿವಾಚಾರ್ಯರು ಸಾನಿಧ್ಯ ವಹಿಸಲಿದ್ದಾರೆ, ಉದ್ಘಾಟಕರಾಗಿ ಗಂಗಾವತಿಯ ಮಾಜಿ ಶಾಸಕ ಪರಣ್ಣ ಮುನವಳ್ಳಿ, ಮುಖ್ಯ ಅತಿಥಿಗಳಾಗಿ ಬಣಜಿಗ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರು ನಿಯೋಜಿತ ಡಾ. ಶಿವಬಸಪ್ಪ ಹೆಸರೂರು, ಶಾಸಕ ಆರ್.ಬಸನಗೌಡ ತುರವಿಹಾಳ ಮತ್ತು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಸೇರಿದಂತೆ ಇನ್ನಿತರರಿದ್ದರು ಭಾಗವಹಿಸಲಿದ್ದಾರೆಂದು ತಿಳಿಸಿದರು.ಈ ಸಂದರ್ಭದಲ್ಲಿ ಬಸಪ್ಪ ಬ್ಯಾಳಿ, ಬಸವಲಿಂಗ ಶೆಟ್ಟಿ, ಅಮರೇಶ ಬ್ಯಾಳಿ ಇದ್ದರು.




ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಬಣಗುಟ್ಟುತ್ತಿದೆ ಭೂಮಾತೆ: ಮಳೆಯಿಲ್ಲದೆ ಬೆಳೆ ನೆಲಕಚ್ಚುವ ಭೀತಿ

◆ ನೈಜ್ಯ ದೆಸೆ ನ್ಯೂಸ್

ಅರಕೇರಾ : ತಾಲೂಕಿನಲ್ಲಿ ಪ್ರಸಕ್ತ ಸಾಲಿನಲ್ಲಿ ಮಳೆಯ ಕೊರತೆ ತೀವ್ರವಾಗಿ ಕಾಡುತ್ತಿದೆ. ರೈತರು ಬಿತ್ತನೆ ಮಾಡಿದ ಹತ್ತಿ, ಸಜ್ಜೆ, ಹೆಸರು ಸೇರಿದಂತೆ ಇತರೆ ಬೆಳೆಗಳು ಮಳೆಯಿಲ್ಲದೆ ಒಣಗುತ್ತಿದ್ದು, ರೈತರು ಕಂಗಾಲಾಗಿದ್ದಾರೆ.ಮೇ ಕೊನೆಯ ವಾರ ಮತ್ತು ಜೂನ್ ಮೊದಲ ವಾರದಲ್ಲಿ ಬಿದ್ದ ಅಲ್ಪಸ್ವಲ್ಪ ಮಳೆಯನ್ನು ನಂಬಿ ರೈತರು ಜಮೀನು ಉಳುಮೆ ಮಾಡಿ ಬಿತ್ತನೆ ಮಾಡಿದ್ದರು. ಬೀಜ ಚಿಗುರೊಡೆದು ಹಸಿರಾಗಿದ್ದ ಬೆಳೆ ಈಗ ನೀರಿನ ಅಭಾವದಿಂದ ಬಾಡುತ್ತಿದೆ. ಮುಂದಿನ ಕೆಲವು ದಿನಗಳಲ್ಲಿ ಮಳೆ ಬಾರದೇ ಇದ್ದರೆ ಇಡೀ ಬೆಳೆಯೇ ನೆಲಕಚ್ಚುವ ಪರಿಸ್ಥಿತಿ ನಿರ್ಮಾಣವಾಗಿದೆ. ತಾಲೂಕಿನಾದ್ಯಂತ ಶೇಕಡಾ 75 ರಷ್ಟು ಬಿತ್ತನೆ ಕಾರ್ಯ ಪೂರ್ಣಗೊಂಡಿದೆ. ಬಿತ್ತನೆಯಾಗಿ 4 ರಿಂದ 5 ವಾರ ಕಳೆದಿದ್ದು, ಈ ಹಂತದಲ್ಲಿ ಬೆಳೆಗಳಿಗೆ ಮಳೆ ಅತ್ಯವಶ್ಯಕವಾಗಿದೆ. ಆದರೆ ಮಳೆ ಇಲ್ಲದ ಕಾರಣ ಚಿಗುರೊಡೆದು ನಿಂತ ಹತ್ತಿ ಮತ್ತು ಇತರೆ ಬೆಳೆಗಳು ಒಣಗುತ್ತಿವೆ.



ಕೊಳವೆಬಾವಿ ಆಧಾರಿತ ನೀರಾವರಿ ಇರುವ ಹೊಲಗಳನ್ನು ಹೊರತುಪಡಿಸಿದರೆ, ಉಳಿದ ಬಹುತೇಕ ಹೊಲಗಳಲ್ಲಿ ಬೆಳೆಗಳಿಗೆ ನೀರಿಲ್ಲದೆ ಭೂಮಾತೆ ಬಣಗುಟ್ಟುತ್ತಿದೆ.ಇನ್ನೂ ಬರಗಾಲದ ಛಾಯೆಯಿಂದ ಹೊರಬಾರದ ರೈತ ಸಮುದಾಯಕ್ಕೆ ಈ ಬಾರಿಯ ಮಳೆ ಕೊರತೆ ಮತ್ತಷ್ಟು ಆತಂಕ ತಂದಿದೆ.ಮಳೆಗಾಗಿ ತಾಲೂಕಿನಾದ್ಯಂತ ಎಲ್ಲಾ ಗ್ರಾಮಗಳಲ್ಲಿ ರೈತರು ಮತ್ತು ಗ್ರಾಮಸ್ಥರು ಪೂರ್ವಜರ ಸಂಪ್ರದಾಯದಂತೆ ವಿಶೇಷ ಪೂಜೆ, ಪ್ರಾರ್ಥನೆ ಮಾಡುತ್ತಿದ್ದಾರೆ. ಆದರೆ ಅವರ ಪ್ರಾರ್ಥನೆಗೆ ಮಳೆ ಮಾತ್ರ "ಜಪ್ಪಯ್ಯ" ಎನ್ನುತ್ತಿಲ್ಲ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.



ಬಿತ್ತಿದ ಬೆಳೆ ಕಣ್ಣೆದುರಿಗೆ ಬಾಡುತ್ತಿದೆ ರೈತರ ಪರಿಸ್ಥಿತಿ ಇಷ್ಟು ಗಂಭಿರವಾಗಿದ್ದರು ಈಗಿನ ಸರ್ಕಾರ ರೈತರಿಗೆ ನೆರವಾಗಬೇಕು ಅದನ್ನು ಬಿಟ್ಟು ಸ್ವತಃ ಮುಖ್ಯಮಂತ್ರಿಗಳೇ "ರೈತರೆ ಬಿತ್ತನೆ ಮಾಡಬೇಡಿ" ಎಂದು ಹೇಳಿಕೆ ನೀಡಿರುವುದು ಬೇಸರದ ಸಂಗತಿ. ಕೂಡಲೇ ಸರ್ಕಾರ ಬರಗಾಲ ಘೋಷಣೆ ಮಾಡಿ ನಮ್ಮ ರೈತರಿಗೆ ಪರಿಹಾರ ನೀಡಬೇಕು.

**ಭೀಮಣ್ಣ ಬಂಗಾರಬಂಡಿ ತಾಂಡದ ರೈತ**

## ನೇಮಕಾತಿ ಪ್ರಕಟಣೆ

**KRIES ನೇಮಕಾತಿ 2026 – 1087 ಶಿಕ್ಷಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 11 ಜುಲೈ 2026**

KRIES ನೇಮಕಾತಿ 2026: 1087 ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ (KRIES) ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದ ಇಲಾಖೆಯಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13–ಆಗಸ್ಟ್–2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: cetonline.karnataka.gov.in

## ಗೂಗೆಬಾಳ ಗ್ರಾಮದಲ್ಲಿ ಜೈನ ಧರ್ಮದ ನಿಶದಿ ಶಾಸನ ಪತ್ತೆ

### ಗೂಗೆಬಾಳದಲ್ಲಿ ಪತ್ತೆಯಾದ ಶಾಸನ ಕುರಿತು ಸಂಶೋಧಕ ಚನ್ನಬಸಪ್ಪ ಮಲ್ಕಂದಿನ್ನಿ ಶನಿವಾರ ಮಾಹಿತಿ ಸಂಗ್ರಹಿಸಿದರು.

◆ ನೈಜ್ಯ ದೆಸೆ ನ್ಯೂಸ್



ಕವಿತಾಳ –: ಸಮೀಪದ ಗೂಗೆಬಾಳ ಗ್ರಾಮದಲ್ಲಿ ಅಪ್ರಕಟಿತ ಜೈನರ ಧರ್ಮದ ನಿಶದಿ ಶಿಲ್ಪ ಶಾಸನ ಪತ್ತೆಯಾಗಿದೆ. ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಶಾಸನದ ಮಾಹಿತಿ ಸಂಗ್ರಹಿಸಿದ ಸಂಶೋಧಕ ಮತ್ತು ಇತಿಹಾಸ ಉಪನ್ಯಾಸಕ ಡಾ.ಚನ್ನಬಸ್ಸಪ್ಪ ಮಲ್ಕಂದಿನ್ನಿ ಅವರು ಈ ಕು–ರಿತು ವಿವರಣೆ ನೀಡಿದರು.ತಾಲ್ಲೂಕು ಕೇಂದ್ರ ಮಸ್ಕಿ ಪಟ್ಟಣದಿಂದ 18 ಕಿ.ಮೀ ದೂರದ ಉತ್ತರ ದಿಕ್ಕಿನಲ್ಲಿರುವ ಗೂಗೆಬಾಳ ಗ್ರಾಮದಲ್ಲಿ ಈಗಾಗಲೇ ಎರಡು ಶಾಸನಗಳು ಪ್ರಕಟವಾಗಿವೆ. ಮೊದಲನೆ ಶಾಸನ ಕ್ರಿ.ಶ. 10ನೇ ಶತಮಾನಕ್ಕೆ ಸೇರಿದ ರಾಷ್ಟ್ರಕೂಟ ಅರಸರ ಶಾಸನ, ಎರಡನೇ ಶಾಸನ ಕಳಚೂರಿ ಅರಸ ರಾಯಮುರಾರಿ ಸೋವಿ ದೇವನಿಗೆ ಸೇರಿದ್ದು ಅದು ಕ್ರಿ.ಶ. 1174ರ ಕಾಲಕ್ಕೆ ಸೇರಿರುತ್ತದೆ. ಈ ಗ್ರಾಮದಲ್ಲಿ ಲಿಂಗಾವಧೂತರ ದೇವಸ್ಥಾನ, ಕಾಶೀ ವಿಶ್ವನಾಥ, ಮಾರುತಿ, ಎರಡು ದುರ್ಗಾದೇವಿ ದೇವಸ್ಥಾನ, ತಾಯಮ್ಮ, ಕೆಂಚಮ್ಮ, ಶೀಲವಂತಿ ದೇವಿ, ಎರಡು ಬನ್ನಿ ಮಹಾಂಕಾಳಿ ಮತ್ತಿತರ ದೇವಸ್ಥಾನಗಳಿವೆ. ಅವುಗಳೊಂದಿಗೆ ಗ್ರಾಮದಲ್ಲಿ ಕ್ರಿ.ಶ. 17–18ನೇ ಶತಮಾನದ 8 ವೀರಗಲ್ಲುಗಳು, 1 ವೀರ ಮಹಾಸತಿ ಶಿಲ್ಪ, ಎರಡು ನಂದಿ ವಿಗ್ರಹ, ಸೂರ್ಯನಾರಾಯಣ ಪೀಠ ಭಾಗ, ಸಪ್ತಮಾತೃಕೆಯರ ಶಿಲ್ಪ, ಗಣೇಶ ಶಿಲ್ಪ, ಕಂಡು ಬರುತ್ತವೆ.ಗ್ರಾಮದ ಊರ ಹೊರಗಿನ ಸಣ್ಣ ನಿಂಗಪ್ಪ ಭೀಮರಾಯಪ್ಪ ಯರಮದೊಡ್ಡಿ ಅವರ ಹುಣಸೆ ಮರದ ಜಮೀನಿನಲ್ಲಿ ಕಪ್ಪು ಶಿಲೆಯ ಅಪ್ರಕಟಿತ ನಿಶದಿ ಶಿಲ್ಪ ಶಾಸನ ಪತ್ತೆಯಾಗಿದೆ. ಅದು ಮೂರುವರೆ ಅಡಿ ಎತ್ತರ ಒಂದೂವರೆ ಅಡಿ ಅಗಲ ಇದೆ, ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿದೆ. ಶಾಸನದ ಮೇಲ್ಭಾಗದಲ್ಲಿ ನಿಶದಿ ಶಿಲ್ಪ ಪದ್ಮಾಸನದಲ್ಲಿ ಕುಳಿತ ಭಂಗಿಯಲ್ಲಿದೆ. ವಿಗ್ರಹದ ಮೇಲ್ಭಾಗದಲ್ಲಿ ಮೂರು ಪೂರ್ಣ ಕುಂಭಗಳಿವೆ. ಅದರ ಕೆಳ ಭಾಗದಲ್ಲಿ 5 ಸಾಲಿನ ಶಾಸನವಿದ್ದು ಸ್ವಸ್ತಿ ಶ್ರೀ ಕೊಂಡಾ ಕುಂದನ್ವಯ, ಬಸದಿ ಅನ್ವಯ, ದ ದೇಸಿಯ ಗಣದ ವೋ. ಕ್ಷ ಜೋಗಬ್ಬೆ ಕಂತಿಶಿ, ಶಿಯರ ಶಾಂತಬ್ಬೆ ಕಂತಿಯರು ಎಂದು ಮಾಹಿತಿ ಉಲ್ಲೇಖಿಸಲಾಗಿದೆ. ಅದು ಕ್ರಿ.ಶ. 10–11 ನೇ ಶತಮಾನಕ್ಕೆ ಸೇರಿದ ಲಿಪಿಯಲ್ಲಿದೆ.ಇದುವರೆಗೂ ಜಿಲ್ಲೆಯಲ್ಲಿ ಜೈನ ಧರ್ಮಕ್ಕೆ ಸಂಬಂಧಿ ಸಿದ 24 ಊರುಗಳಲ್ಲಿ ಕುರುಹುಗಳು ಕಂಡು ಬಂದಿದ್ದು ಪ್ರಸ್ತುತ ಗೂಗೆಬಾಳ ಗ್ರಾಮವು 25ನೇ ಗ್ರಾಮವಾಗಿದೆ ಎಂದು ಚನ್ನಬಸ್ಸಪ್ಪ ಮಲ್ಕ0ದಿನ್ನಿ ತಿಳಿಸಿದರು.ಈ ಕ್ಷೇತ್ರ ಕಾರ್ಯದಲ್ಲಿ ರಮೇಶ ಯರಮದೊಡ್ಡಿ, ವಿನಯಕುಮಾರ ಸ್ವಾಮಿ ಹಿರೇಮಠ, ಅಂಬು ಡಿ.ಜಿ. ಶಿವಕುಮಾರ, ಚಂದ್ರಕಾಂತ, ವೀರನಗೌಡ, ಹನುಮಗೌಡ ಪಾಟೀಲ್, ಮತ್ತಿತರರು ಉಪಸ್ಥಿತರಿದ್ದರು ಮತ್ತು ಪ್ರೊ.ಜಿ.ಮಂಜುನಾಥ ಅವರು ಶಾಸನವನ್ನು ತಿದ್ದುಪಡಿ ಮಾಡಿ ನೀಡಿದರು ಎಂದು ಮಾಹಿತಿ ನೀಡಿದರು.

## ಭರ್ಜರಿ ಭಾಗ್ಯ: ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸಿಹಿ ಸುದ್ದಿ – ಶೂ, ಸಾಕ್ಸ್ ಜೊತೆಗೆ ಸ್ಯಾಂಡಲ್ಸ್ ಉಚಿತ ವಿತರಣೆ

◆ ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 1ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಸುಮಾರು 36.56 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾವಿಕಾಸ ಯೋಜನೆಯಡಿ ಉಚಿತ ಶೂ, ಸಾಕ್ಸ್ ಹಾಗೂ ಸ್ಯಾಂಡಲ್ಸ್ ವಿತರಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಕುರಿತು ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಮಾರ್ಗಸೂಚಿಗಳನ್ನು ನೀಡಿದೆ.ಈ ವರ್ಷ ಶೂ ಮತ್ತು ಸಾಕ್ಸ್‌ಗಳನ್ನು ಒಬ್ಬರೇ ಪೂರೈಕೆದಾರ–ರಿಂದ ಖರೀದಿಸಲಾಗುತ್ತಿದ್ದು, ಪ್ರತಿ ವಿದ್ಯಾರ್ಥಿಗೆ ₹195 ವೆಚ್ಚ ನಿಗದಿಪಡಿಸಲಾಗಿದೆ. ಈ ಕ್ರಮದಿಂದ ಸರ್ಕಾರಕ್ಕೆ ಸುಮಾರು ₹30 ಕೋಟಿ ಉಳಿತಾಯವಾಗಲಿದೆ ಎಂದು ಇಲಾಖೆ ತಿಳಿಸಿದೆ. ಒಟ್ಟಾರೆ ₹104 ಕೋಟಿ ವೆಚ್ಚದಲ್ಲಿ ಶೂ, ಸಾಕ್ಸ್ ಹಾಗೂ ಸ್ಯಾಂಡಲ್ಸ್‌ಗಳನ್ನು ಖರೀದಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಮೂಲಕ ಸರಬರಾಜುದಾರರನ್ನು ಈಗಾಗಲೇ ಆಯ್ಕೆ ಮಾಡಲಾಗಿದೆ. ಸರಬರಾಜು ಕಾರ್ಯ ಆರಂಭವಾಗಿದ್ದು, ಇನ್ನೆರಡು–ಮೂರು ದಿನಗಳಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಿಗೆ ಸಾಮಗ್ರಿಗಳು ತಲುಪುವ ನಿರೀಕ್ಷೆಯಿದೆ.ಇಲಾಖೆಯ ಪ್ರಮುಖ ಸೂಚನೆಗಳು – ಶೂ, ಸಾಕ್ಸ್ ಮತ್ತು ಸ್ಯಾಂಡಲ್ಸ್‌ಗಳನ್ನು ಸುರಕ್ಷಿತವಾಗಿ ದಾಸ್ತಾನು ಮಾಡಬೇಕು.– ಇಲಿಗಳು, ಗೆದ್ದಲುಗಳು ಹಾಗೂ ಮಳೆನೀ–ರಿನಿಂದ ಹಾನಿಯಾಗದಂತೆ ಸಂರಕ್ಷಿಸಬೇಕು.– ವಿದ್ಯಾರ್ಥಿಗಳ ತರಗತಿ ಹಾಗೂ ಅಳತೆಗೆ ಅನುಗುಣವಾಗಿ ವಿಂಗಡಿಸಿ ಪ್ಯಾಕಿಂ–ಗ್ ಮಾಡಬೇಕು.– ಸರಬರಾಜುದಾರರಿಗೆ ಅಗತ್ಯ ಸ್ಥಳಾವಕಾಶ ಕಲ್ಪಿಸಿ, ಶಾಲಾವಾರು ವಿತರಣಾ ವೇಳಾಪಟ್ಟಿ ಸಿದ್ಧಪಡಿಸಬೇಕು.– ಸಾಮಗ್ರಿಗಳು ಶಾಲೆಗೆ ತಲುಪಿದ ತಕ್ಷಣ ಯಾವುದೇ ವಿಳಂಬವಿಲ್ಲದೆ ವಿದ್ಯಾರ್ಥಿಗಳಿಗೆ ವಿತರಿಸಬೇಕು.– ಅಳತೆ ಸಂಬಂಧಿತ ಸಮಸ್ಯೆಗಳು ಕಂಡುಬಂದರೆ ತಕ್ಷಣ ಕ್ರಮ ಕೈಗೊಂಡು ಹಿರಿಯ ಅಧಿಕಾ–ರಿಗಳಿಗೆ ಮಾಹಿತಿ ನೀಡಬೇಕು.ಯೋಜನೆಯ ಹಿನ್ನೆಲೆ ರಾಜ್ಯದ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್ ವಿತರಿಸುವ ವಿದ್ಯಾವಿಕಾಸ ಯೋಜನೆಯನ್ನು 2017–18ನೇ ಶೈಕ್ಷಣಿಕ ವರ್ಷದಲ್ಲಿ ಆರಂಭಿಸಲಾಗಿತ್ತು. ಅನುದಾನದ ಕೊರತೆಯಿಂದ 2020–21 ಹಾಗೂ 2021–22ರಲ್ಲಿ ಯೋಜನೆ ಸ್ಥಗಿತಗೊಂಡಿತ್ತು. ಬಳಿಕ 2022–23ರಿಂದ ಯೋಜನೆಯನ್ನು ಪುನರಾರಂಭಿಸಲಾಯಿತು. ಈಗ ಸರ್ಕಾರ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟು, ಶೂ ಮತ್ತು ಸಾಕ್ಸ್‌ಗಳ ಜೊತೆಗೆ ಸ್ಯಾಂಡಲ್ಸ್‌ಗಳನ್ನೂ ಉಚಿತವಾಗಿ ವಿತರಿಸುವ ಮೂಲಕ ವಿದ್ಯಾರ್ಥಿಗಳ ಅಗತ್ಯಗಳನ್ನು ಇನ್ನಷ್ಟು ಸಮರ್ಪಕವಾಗಿ ಪೂರೈಸಲು ಮುಂದಾಗಿದೆ. ಈ ಕ್ರಮದಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದರ ಜೊತೆಗೆ, ಪೋಷಕರ ಮೇಲಿನ ಆರ್ಥಿಕ ಹೊರೆ ಕೂಡ ಕಡಿಮೆಯಾಗಲಿದೆ.ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಹೆಚ್ಚಿನ ಅನುಕೂಲ ಈ ಯೋಜನೆಯಡಿ ವಿತರಿಸಲಾಗುವ ಶೂ, ಸಾಕ್ಸ್ ಹಾಗೂ ಸ್ಯಾಂಡಲ್ಸ್‌ಗಳು ವಿದ್ಯಾರ್ಥಿಗಳ ದೈನಂದಿನ ಶಾಲಾ ಜೀವನವನ್ನು ಇನ್ನಷ್ಟು ಸುಗಮಗೊಳಿಸಲಿವೆ. ವಿಶೇಷವಾಗಿ ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳಿಗೆ ಇದು ಮಹತ್ತರ ನೆರವಾಗಲಿದೆ. ಪ್ರತಿ ವರ್ಷ ಹೊಸ ಶೈಕ್ಷಣಿಕ ವರ್ಷ ಆರಂಭವಾಗುವ ಸಂದರ್ಭದಲ್ಲಿ ಶಾಲಾ ಸಮವಸ್ತ್ರದ ಜೊತೆಗೆ ಪಾದರಕ್ಷೆಗಳ ವೆಚ್ಚವೂ ಪೋಷಕರಿಗೆ ಹೆಚ್ಚುವರಿ ಹೊರೆಯಾಗುತ್ತಿತ್ತು. ಉಚಿತ ವಿತರಣೆಯಿಂದ ಈ ಹೊರೆ ಗಣನೀಯವಾಗಿ ಕಡಿಮೆಯಾಗಲಿದೆ.ಅಳತೆಗೆ ಅನುಗುಣ ವಿತರಣೆ ವಿದ್ಯಾರ್ಥಿಗಳಿಗೆ ಸರಿಯಾದ ಅಳತೆಯ ಶೂ ಮತ್ತು ಸ್ಯಾಂಡಲ್ಸ್ ದೊರೆಯುವಂತೆ ಶಾಲೆಗಳು ಮುಂಚಿತವಾಗಿಯೇ ವಿದ್ಯಾರ್ಥಿಗಳ ಅಳತೆಯ ಮಾಹಿತಿಯನ್ನು ಪರಿಶೀಲಿಸಬೇಕು. ಅಳತೆ ಸರಿಹೊಂದದಿದ್ದರೆ ತಕ್ಷಣವೇ ಬದಲಾವಣೆ ಮಾಡುವ ವ್ಯವಸ್ಥೆಯನ್ನೂ ಕಲ್ಪಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.ಶೀಘ್ರದಲ್ಲೇ ವಿತರಣೆ ಆರಂಭ ಸರಬರಾಜು ಪ್ರಕ್ರಿಯೆ ಈಗಾಗಲೇ ಆರಂಭವಾಗಿರುವುದರಿಂದ, ಮುಂದಿನ ಕೆಲವೇ ದಿನಗಳಲ್ಲಿ ಜಿಲ್ಲೆಯ ಗೋದಾಮುಗಳಿಂದ ಶಾಲೆಗಳಿಗೆ ಸಾಮಗ್ರಿಗಳನ್ನು ತಲುಪಿಸಲಾಗುತ್ತದೆ. ಬಳಿಕ ಶಾಲಾ ಆಡಳಿತವು ನಿಗದಿತ ವೇಳಾಪಟ್ಟಿಯಂತೆ ವಿದ್ಯಾರ್ಥಿಗಳಿಗೆ ಉಚಿತವಾಗಿ ಶೂ, ಸಾಕ್ಸ್ ಹಾಗೂ ಸ್ಯಾಂಡಲ್ಸ್‌ಗಳನ್ನು ವಿತರಿಸಲಿದೆ.

## ದೇವದುರ್ಗ ವಿಧಾನಸಭಾ ಯುವ ಕಾಂಗ್ರೆಸ್ ವತಿಯಿಂದ ಎಸ್.ಐ.ಆರ್. ಕುರಿತು ವಿಶೇಷ ಜಾಗೃತಿ ಹಾಗೂ ಕಾರ್ಯಕಾರಣಿ ಸಭೆ ಯಶಸ್ವಿ

◆ ನೈಜ್ಯ ದೆಸೆ ನ್ಯೂಸ್

ದೇವದುರ್ಗ, ಜುಲೈ 12: ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನದಲ್ಲಿ ದೇವದುರ್ಗ ವಿಧಾನಸಭಾ ಕ್ಷೇತ್ರ ಯುವ ಕಾಂಗ್ರೆಸ್ ಸಮಿತಿ ಹಾಗೂ ದೇವದುರ್ಗ ಮತ್ತು ಅರಕೇರಾ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿಗಳ ವತಿಯಿಂದ ಎಸ್.ಐ.ಆರ್. (ಖಿಠಿಜಛಿಚಿಟ ಖಟಿಣಜಟಿ–.ಿತಜ ಖಿಜತುಖಿಠಟಿ) ಕುರಿತು ವಿಶೇಷ ಜಾಗೃತಿ ಹಾಗೂ ಕಾರ್ಯಕಾರಣಿ ಸಭೆ ಯಶಸ್ವಿಯಾಗಿ ನಡೆಯಿತು.ಸಭೆಯಲ್ಲಿ ಎಸ್.ಐ.ಆರ್. ಪ್ರಕ್ರಿಯೆ, ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ, ಹೊಸ ಮತದಾರರ ನೋಂದಣಿ, ಮತದಾರರ ಹೆಸರು ಮತ್ತು ವಿಳಾಸ ತಿದ್ದುಪಡಿ ಸೇರಿದಂತೆ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಕುರಿತು ಸಮಗ್ರ ಚರ್ಚೆ ನಡೆಸಲಾಯಿತು.




ಬೂತ್ ಮಟ್ಟದಲ್ಲಿ ಯುವ ಕಾಂಗ್ರೆಸ್ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಸಕ್ರಿಯವಾಗಿ ಕಾರ್ಯನಿರ್ವಹಿಸಿ ಪ್ರತಿಯೊಬ್ಬ ಅರ್ಹ ಮತದಾರರಿಗೂ ಅಗತ್ಯ ನೆರವು ಒದಗಿಸುವಂತೆ ಮುಖಂಡರು ಕರೆ ನೀಡಿದರು.ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಡಾ. ಕೆ.ಆರ್. ದಾದಾಪೀರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಹುಸೇನ್ ಭಾಷಾ, ಜಿಲ್ಲಾ ಅಧ್ಯಕ್ಷ ಮರಿಸ್ವಾಮಿ, ದೇವದುರ್ಗ ವಿಧಾನಸಭಾ ಕ್ಷೇತ್ರ ಯುವ ಕಾಂಗ್ರೆಸ್ ಅಧ್ಯಕ್ಷ ಲಿಂಗಣ್ಣ ನಾಯಕ, ದೇವದುರ್ಗ ಬ್ಲಾಕ್ ಅಧ್ಯಕ್ಷ ಕುಮಾರ ರಾಠೋಡ್, ಉಪಾಧ್ಯಕ್ಷ ರಮೇಶ್ ಬಾಗೂರು, ಕಾರ್ಯದರ್ಶಿಗಳಾದ ಗೋಪಾಲ್ ನಾಯಕ ಹಾಗೂ ಮೌನೇಶ ನಾಯಕ ಸೇರಿದಂತೆ ಬೂದಿವಸವ, ಬಾಬು, ರಂಗನಾಥ್ ಟೇಲರ್, ರಂಗನಾಥ್ ಕಾಮದಳ್, ಪೋಮಣ್ಣ, ಹನುಮಂತ ಮಸರಕಲ್, ನರಸಣ್ಣ ನಾಯಕ (ಮಲ್ಲಾಪುರ), ಕರೆಪ್ಪ ಬಡಗನ್, ಮೌನೇಶ್, ಖಾಜಾ ಸಾಬ್, ಖಾಸಿಂ ಸಾಬ್, ರಂಗಣ್ಣ ಗಾಲಿ (ಸಲೀಕೇಪುರ), ಮಲ್ಲಿಕಾರ್ಜುನ ಉಲ್ಕಬಂಡ್, ದೇವರಾಜ್ ವಗಡಂಬಳಿ ಸೇ–ರಿದಂತೆ ಯುವ ಕಾಂಗ್ರೆಸ್ ಸಮಿತಿಯ ಅನೇಕ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಿದರು.

## ಕವಿತಾಳದಲ್ಲಿ ಜೆಡಿಎಸ್ ಕಾರ್ಯಕರ್ತರ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಸಭೆ

◆ ನೈಜ್ಯ ದೆಸೆ ನ್ಯೂಸ್

ಕವಿತಾಳ 12 : ಜುಲೈ ಪಟ್ಟಣದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಖಋಖ ಕುರಿತು ಮಹತ್ವದ ಸಭೆಯನ್ನು ನಡೆಸಲಾಯಿತು.ಈ ಸಂದರ್ಭದಲ್ಲಿ ಮಾನ್ವಿ ವಿಧಾನಸಭಾ ಕ್ಷೇತ್ರದ ನಿಕಟಪೂರ್ವ ಶಾಸಕರಾದ ಶ್ರೀ ರಾಜಾ ವೆಂಕಟಪ್ಪ ನಾಯಕ ದೊರೆ ಅವರು, ಖಋಖ ಕುರಿತು ಸಮಗ್ರ ಮಾಹಿತಿ ನೀಡಿ, ಪ್ರತಿಯೊಬ್ಬ ಮತದಾರರೂ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಕಡ್ಡಾಯವಾಗಿ ಪರಿಶೀಲಿಸಬೇಕು ಹಾಗೂ ಯಾವುದೇ ಅರ್ಹ ಮತದಾರರ ಹೆಸರು ಪಟ್ಟಿಯಿಂದ ತಪ್ಪಿಹೋಗದಂತೆ ಜಾಗರೂಕರಾಗಿ ಕಾರ್ಯನಿರ್ವಹಿಸುವಂತೆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತ–




ರಿಗೆ ಸೂಚನೆ ನೀಡಿದರು.. ಇದೇ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಸಿರವಾರ ತಾಲೂಕು ಅಧ್ಯಕ್ಷರಾದ ಮಲ್ಲಿಕಾರ್ಜುನ ಪಾಟೀಲ ಬಲ್ಲಟಗಿ, ಮಾನ್ವಿ ಜೆಡಿಎಸ್ ತಾಲೂಕು ಅಧ್ಯಕ್ಷರಾದ ಈರಣ್ಣ ಮರ್ಲಟ್ಟಿ, ಜೆಡಿಎಸ್ ಪಕ್ಷದ ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ರಾಜಾ ರಾಮಚಂದ್ರ ನಾಯಕ ದೊರೆ, ಮಾಜಿ ಪುರಸಭೆ ಸದಸ್ಯರಾದ ಬಾಷಾ ಸಾಬ್, ಮೌಲಾಸಾಬ್, ಊ ಮೌನೇಶ್ ಗೌಡ, ಶರಣಪ್ಪ ಗೌಡ ಮದ್ಲಾಪುರ, ಮೌನೇಶ್ ನಾಯಕ ಹೀರಾ, ರಂಜಿತ್ ಕುಮಾರ್, ದಾನಪ್ಪ ಸಿರವಾರ, ರಾಜಶೇಖರ ತೊಪ್ಪಲದೊಡ್ಡಿ, ಶಶಿಧರ ಗೌಡ ಕವಿತಾಳ, ಮೋನಪ್ಪ ವಿಶ್ವಕರ್ಮ, ಖಾಜಾಪಾಶ ಕವಿತಾಳ,ಹನುಮಂತ ಬುಳ್ಳಾಪುರ , ಸೂಗುರಯ್ಯ ಹಿರೇಮಠ,ಕಿ–ರಿಲಿಂಗ ಮ್ಯಾಗಳಮನಿ ಕವಿತಾಳ, ಹುಸೇನ್ ಭಾಷ ಗಣದಿನ್ನಿ, ಮೌನೇಶ್ ಬಸಾಪುರ.ಹನುಮಂತ ಭೋವಿ, ದವಲ್ ಸಾಬ್.ಮುಸ್ತಫಾ ಒಂಟಿಬಂಡಿ, ಲಳ್ಳೆಪ್ಪ ನಾಯಕ್ ಶಿವಪ್ಪ ಚಲುವಾದಿ ಹನುಮಂತ ಕಬ್ಬರ್.ಸೇರಿದಂತೆ ಪಕ್ಷದ ಮುಖಂಡರು ಕಾರ್ಯಕರ್ತರು ಸೇರಿದ್ದರು..

## SC, ST ಕುಂದುಕೊರತೆ ಸಭೆ ಸಾರ್ವಜನಿಕರಿಗಾಗಿ ಮಾತ್ರ, ಪೊಲೀಸ್ ಸಿಬ್ಬಂದಿಗಲ್ಲ: ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟನೆ

◆ ನೈಜ್ಯ ದೆಸೆ ನ್ಯೂಸ್

ಬೆಂಗಳೂರು ರಾಜ್ಯದ ಪೊಲೀಸ್ ಘಟಕಗಳಲ್ಲಿ ಪ್ರತಿ ತಿಂಗಳ ಎರಡನೇ ಭಾನುವಾರದಂದು ಆಯೋಜಿಸಲಾಗುವ "ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ದಿನ"ದ (SC/ST Day) ಸಭೆಗಳು ಪೊಲೀಸ್ ಇಲಾಖೆಯ ಉದ್ಯೋಗಿಗಳಿಗೆ ಮೀಸಲಾಗಿಲ್ಲ. ಬದಲಿಗೆ, ಇದು ಸಂಪೂರ್ಣವಾಗಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸುವ ಸಭೆಯಾಗಿದೆ ಎಂದು ಸರ್ಕಾರ ಅಧಿಕೃತ ಸ್ಪಷ್ಟನೆ ನೀಡಿದೆ. ಹಿಂದಿನ ಪ್ರಕಟಣೆಯೊಂದರಲ್ಲಿ ಉಂಟಾಗಿದ್ದ ಗೊಂದಲ ಮತ್ತು ತಪ್ಪು ಗ್ರಹಿಕೆಯನ್ನು ನಿವಾ–ರಿಸಿರುವ ಗೃಹ ಇಲಾಖೆ, ಈ ಸಭೆಗಳು ಕೇವಲ ಎಸ್‌ಸಿ/ಎಸ್‌ಟಿ ಸಮುದಾಯದ ನಾಗ–ರಿಕರ ಕಲ್ಯಾಣ ಮತ್ತು ಅವರ ನ್ಯಾಯಯುತ ಹಕ್ಕುಗಳ ರಕ್ಷಣೆಗಾಗಿ ನಡೆಸಲಾಗುವ ಸಾರ್ವಜನಿಕ ಸಂಪರ್ಕ ಸಭೆಗಳಾಗಿವೆ ಎಂದು ಒತ್ತಿಹೇಳಿದೆ.ಸಾರ್ವಜನಿಕರಿಗೆ ಮುಕ್ತ ಅವಕಾಶ ಸ್ಥಾಯಿ ಆದೇಶ ಸಂಖ್ಯೆ 1010 (ದಿನಾಂಕ 17.11.2015) ರ ನಿಯಮಾವಳಿಗಳ ಅನ್ವಯ, ಕರ್ನಾಟಕದ ಎಲ್ಲಾ ಪೊಲೀಸ್



ಆಯುಕ್ತಾಲಯಗಳು, ಜಿಲ್ಲಾ ಪೊಲೀಸ್ ಕಚೇರಿಗಳು ಹಾಗೂ ಸ್ಥಳೀಯ ಪೊಲೀಸ್ ಠಾಣಾ ಮಟ್ಟದಲ್ಲಿ ಪ್ರತಿ ತಿಂಗಳ ಎರಡನೇ ಭಾನುವಾರದಂದು ಈ ಸಭೆಗಳನ್ನು ಕಡ್ಡಾಯವಾಗಿ ನಡೆಸಲಾಗುತ್ತದೆ.ಸಭೆಯ ಪ್ರಮುಖ ಉದ್ದೇಶಗಳು: ಎಸ್‌ಸಿ/ಎಸ್‌ಟಿ ಸಮುದಾಯದ ಸಾರ್ವಜನಿಕರು ಎದುರಿಸುತ್ತಿರುವ ಕಾನೂನು ಸುವ್ಯವಸ್ಥೆ ಸಮಸ್ಯೆಗಳಿಗೆ ಸ್ಪಂದಿಸುವುದು. ದೌರ್ಜನ್ಯ ಪ್ರಕರಣಗಳು, ಬಾಕಿ ಉಳಿದಿರುವ ದೂರುಗಳು ಮತ್ತು ಪೊಲೀಸ್ ಸೇವೆಗಳಿಗೆ ಸಂಬಂಧಿಸಿದ ಅಹವಾಲುಗಳನ್ನು ಆಲಿಸುವುದು.ನಾಗರಿಕರು ನೇರವಾಗಿ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿ ತಮ್ಮ ಸಮಸ್ಯೆಗಳಿಗೆ ತ್ವರಿತವಾಗಿ ಕಾನೂನು ಪರಿಹಾರ ಕಂಡುಕೊಳ್ಳಲು ವೇದಿಕೆ ಕಲ್ಪಿಸುವುದು. ಗೃಹ ಸಚಿವರಿಂದ ಕಟ್ಟುನಿಟ್ಟಿನ ನಿರ್ದೇಶನ ನಿನ್ನೆಯಷ್ಟೇ ಹೊರಡಿಸಲಾಗಿದ್ದ ಪ್ರಕಟಣೆಯಲ್ಲಿ 'ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ' ಎಂದು ತಪ್ಪಾಗಿ ಉಲ್ಲೇಖಿಸಲಾಗಿತ್ತು. ಈಗ ಆ ತಪ್ಪನ್ನು ಸರಿಪಡಿಸಲಾಗಿದ್ದು, ಸಾರ್ವಜನಿಕರ ಹಿತರಕ್ಷಣೆಯೇ ಈ ಸಭೆಯ ಮೂಲ ಆಶಯವಾಗಿದೆ ಎಂದು ತಿಳಿಸಲಾಗಿದೆ.ಡಿಜಿ ಮತ್ತು ಐಜಿಪಿಗೆ ಸೂಚನೆ:ಆದೇಶದ ಮೂಲ ಉದ್ದೇಶಕ್ಕೆ ಧಕ್ಕೆಯಾಗದಂತೆ ಪ್ರತಿ ತಿಂಗಳ ಎರಡನೇ ಭಾನುವಾರದಂದು ನಿಯಮಿತವಾಗಿ ಸಾರ್ವಜನಿಕ ಸಭೆಗಳನ್ನು ಹಮ್ಮಿಕೊಳ್ಳಬೇಕು. ಸಭೆಗೆ ಬರುವ ನಾಗರಿಕರ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲೇ ಸೂಕ್ತ ಪರಿಹಾರ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಗೃಹ ಸಚಿವರು ರಾಜ್ಯ ಪೊಲೀಸ್ ಮಹಾನಿರ್ದೇಶಕ–ರಿಗೆ (DG & IGP) ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.ಅನುಭವಿ ರಾಜಕಾರಣಿ, ಅಭಿವೃದ್ಧಿಯ ಹರಿಕಾರ ಹಾಗೂ ಮಾನವೀಯ ನಾಯಕನನ್ನು ಕಳೆದುಕೊಂಡಿದೆ.ಅವರ ಆದರ್ಶಗಳು, ಅಭಿವೃದ್ಧಿಯ ಕನಸುಗಳು ಮತ್ತು ಜನಸೇವೆಯ ಬದ್ಧತೆ ಮುಂದಿನ ಪೀಳಿಗೆಗೆ ಸದಾ ಸ್ಫೂರ್ತಿಯಾಗಿರಲಿದೆ. ಅವರ ಅಗಲಿಕೆಯಿಂದ ಜಿಲ್ಲೆಯ ಜನತೆ ಅನುಭವಿ ಜನನಾಯಕನನ್ನು ಕಳೆದುಕೊಂಡಂತಾಗಿದೆ. ಅವರ ಆದರ್ಶಗಳು, ಸರಳ ವ್ಯಕ್ತಿತ್ವ ಹಾಗೂ ಸಮಾಜಮುಖಿ ಸೇವೆಗಳು ಸದಾ ಸ್ಮರಣೀಯವಾಗಿರಲಿವೆ ಎಂದು ಅವರು ಹೇಳಿದ್ದಾರೆ.ದಿವಂಗತ ಸೈಯದ್ ಯಾಸಿನ್ ಅವರ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲಿ ಹಾಗೂ ಅವರ ಕುಟುಂಬದ ಸದಸ್ಯರು, ಬಂಧು–ಬಳಗ, ಅಭಿಮಾನಿಗಳು ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಬಿ. ಅಬ್ದುಲ್ ಕರೀಂ ಸಾಬ್ ಕವಿತಾಳ ತಮ್ಮ ಸಂತಾಪ ಸಂದೇಶದಲ್ಲಿ ಪ್ರಾರ್ಥಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಇಂಟಿಗ್ರೇಟೆಡ್ ಪಿಎಚ್.ಡಿ (Integrated Ph.D.)

ಇಂಟಿಗ್ರೇಟೆಡ್ ಪಿಎಚ್.ಡಿ (Integrated Ph.D.) ಎನ್ನುವುದು ಸ್ನಾತಕೋತ್ತರ ಪದವಿ (Master's) ಮತ್ತು ಡಾಕ್ಟರೇಟ್ ಪದವಿ (Ph.D.) ಎರಡನ್ನೂ ಒಟ್ಟಿಗೆ ನೀಡುವ ಉನ್ನತ ಶಿಕ್ಷಣದ ಸಂಶೋಧನಾ ಕಾರ್ಯಕ್ರಮವಾಗಿದೆ. ಪ್ರತ್ಯೇಕವಾಗಿ ಎಂ.ಎಸ್ಸಿ/ಎಂ.ಎ ಮಾಡುವುದಕ್ಕಿಂತ ಇದು 1 ರಿಂದ 2 ವರ್ಷಗಳನ್ನು ಉಳಿಸುತ್ತದೆ ಮತ್ತು ಕಲಿಯುವವರಿಗೆ ನೇರವಾಗಿ ಸಂಶೋಧನೆಯಲ್ಲಿ ತೊಡಗಲು ಅವಕಾಶ ನೀಡುತ್ತದೆ.ಕೋರ್ಸ್‌ನ ಪ್ರಮುಖ ವಿವರಗಳು:ಅವಧಿ (Duration): ಸಾಮಾನ್ಯವಾಗಿ 3 ರಿಂದ 5 ವರ್ಷಗಳು ಇರುತ್ತದೆ. ಇದು ವಿದ್ಯಾರ್ಥಿಯ ಸಂಶೋಧನಾ ವಿಷಯ ಮತ್ತು ಪ್ರಗತಿಯನ್ನು ಅವಲಂಬಿಸಿರುತ್ತದೆ.ಅರ್ಹತೆ (Eligibility): ಸಂಬಂಧಿತ ವಿಷಯದಲ್ಲಿ ಕನಿಷ್ಠ ಶೇ. 55% ಅಂಕಗಳೊಂದಿಗೆ ಪದವಿ (B.Sc, ಃ.೦ ಅಥವಾ ತತ್ಸಮಾನ) ಪೂರ್ಣಗೊಳಿಸಿರಬೇಕು.ಪ್ರವೇಶ ಪ್ರಕ್ರಿಯೆ (Admission): ರಾಷ್ಟ್ರೀಯ ಮಟ್ಟದ ಪ್ರವೇಶ ಪರೀಕ್ಷೆಗಳಾದ ಎಂಒ, CUET, ಅಥವಾ ಆಯಾ ಸಂಸ್ಥೆಗಳು ನಡೆಸುವ ಪ್ರತ್ಯೇಕ ಪ್ರವೇಶ ಪರೀಕ್ಷೆ ಮತ್ತು ಸಂದರ್ಶನದ ಆದ-ಾರದ ಮೇಲೆ ಪ್ರವೇಶ ನೀಡಲಾಗುತ್ತದೆ.ಪ್ರಮುಖ ವಿಷಯಗಳು: ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ (Life Sciences), ಇಂಜಿನಿಯರಿಂಗ್, ಮತ್ತು ಸಮಾಜ ವಿಜ್ಞಾನಗಳು.ಪ್ರಮುಖ ಸಂಸ್ಥೆಗಳು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (IISc), ಜೆ.ಎನ್.ಸಿ.ಎ.ಎಸ್.ಆರ್ (JNCASR), ಐಸರ್ (IISER), ಮತ್ತು ಐಐಐಟಿಬಿ (IIITB).ಸೌಲಭ್ಯಗಳು ಮತ್ತು ವಿಶೇಷತೆ:ಕೋರ್ಸ್‌ನ ಮೊದಲ ಭಾಗದಲ್ಲಿ ಸ್ನಾತಕೋತ್ತರ (Master's) ಹಂತದ ತರಗತಿಗಳು ಇರುತ್ತವೆ.ನಂತರದ ವರ್ಷಗಳಲ್ಲಿ ಸಂಪೂರ್ಣವಾಗಿ ಮೂಲ ಸಂಶೋಧನೆ (Research) ಮತ್ತು ಡಾಕ್ಟರೇಟ್ ಪ್ರಬಂಧ (Thesis) ಬರೆಯುವುದರ ಮೇಲೆ ಗಮನಹರಿಸಲಾಗುತ್ತದೆ. ಹೆಚ್ಚಿನ ಸಂಸ್ಥೆಗಳು ಸಂಶೋಧನೆ ನಡೆಸುವ ವಿದ್ಯಾರ್ಥಿಗಳಿಗೆ ಮಾಸಿಕ ಫೆಲೋಶಿಪ್/ವೇತನ (Stipend) ನೀಡುತ್ತವೆ.

## ಬಸವಸಾಗರ ಜಲಾಶಯಕ್ಕೆ ಮಾಜಿ ಶಾಸಕ ಡಿ.ಎಸ್.ಹೂಲಗೇರಿ ಭೇಟಿ : ಪರೀಶಿಲನೆ

◆ ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು : ಜು 13 –ಕೃಷ್ಣಾಭಾಗ್ಯ ಜಲನಿಗಮ ನಿಯಮಿತ ವ್ಯಾಪ್ತಿಯಲ್ಲಿ ಬರುವ ಬಸವಸಾಗರ ಜಲಾಶಯಕ್ಕೆ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷರು ಹಾಗೂ ಮಾಜಿ ಶಾಸಕ ಡಿ.ಎಸ್. ಹೂಲಗೇರಿ ಭೇಟಿ ನೀಡಿ ಅಲ್ಲಿನ ನೀರಿನ ಪ್ರಮಾಣ ಪರೀಶಿಲಿಸಿದರು. ಈಗಾಗಲೇ 19 ಟಿಎಂಸಿ ನೀರಿನ ಮಟ್ಟ ಇದ್ದು, ಇನ್ನೂ 14 ಟಿಎಂಸಿ ಜಲಾಶಯಕ್ಕೆ ನೀರು ತುಂಬುವುದು ಅವಶ್ಯಕತೆ ಇದ್ದು ಇನ್ನೂ 2–3 ದಿನಗಳಲ್ಲಿ ಜಲಾಶಯ ಸಂಪೂರ್ಣ ಭರ್ತಿಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಲಿಂದ ಮಾಹಿತಿ ಪಡೆದುಕೊಂಡಿದ್ದಾರೆ , ರೈತರು ಯಾವ ರೀತಿಯಲ್ಲೂ ಆತಂಕಕ್ಕೆ ಒಳಗಾಗಬಾರದು ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ಲಿಂಗಸಗೂರು ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅದ್ಯಕ್ಷ ಮಹ್ಮದ್ ರಫೀ, ಲಿಂಗಸಗೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಯಾದ ಜೀವನಗೌಡ ಬಾಳೆಗೌಡ್ರು ಉಪಸ್ಥಿತಿ ಇದ್ದರು.

## ದೇವದುರ್ಗ ದುರಂತ : ಮಮತಾ ಪ್ರಭುದೊರೆ ಅವರಿಂದ ಮೃತರ ಕುಟುಂಬಗಳಿಗೆ ಸಾಂತ್ವನ

◆ ನೈಜ್ಯ ದೆಸೆ ನ್ಯೂಸ್



ಅರಕೇರಾ : ದೇವದುರ್ಗ ಪಟ್ಟಣದಲ್ಲಿ ಇತ್ತೀಚೆಗೆ ಖಾಸಗಿ ವಾಣಿಜ್ಯ ಕಟ್ಟಡವೊಂದರ ಮೇಲ್ಚಾವಣಿ ಕುಸಿದು ಕ್ಯಾದಿಗ್ಗೇರಾ ಗ್ರಾಮದ ನಾಗರಾಜ, ಸಮುದ್ರ ಗ್ರಾಮದ ರವಿಕುಮಾರ ಕೋತಿಗುಡ್ಡ ಗ್ರಾಮದ ಅರ್ಜುನ ಎಂಬ ಮೂವರು ಯುವ ವಿದ್ಯಾರ್ಥಿಗಳು ಅಕಾಲಿಕವಾಗಿ ಪ್ರಾಣ ಕಳೆದುಕೊಂಡಿರುವುದು ತ್ರೀವ ನೋವುನ್ನುಂಟುಮಾಡಿದೆ. ಈ ದುಃಖದ ಸಂದರ್ಭದಲ್ಲಿ ಮಮತಾ ಪ್ರಭುದೊರೆ ನಾಗೋಲಿಯವರು ಮೃತ ವಿದ್ಯಾರ್ಥಿಗಳ ಕುಟುಂಬಗಳಿಗೆ ಸಾಂತ್ವನ ಹೇಳಲು ಭೇಟಿ ನೀಡಿದರು.ದುಃಖತ್ತಪ್ತ ಕುಟುಂಬಗಳಿಗೆ ಮಾನಸಿಕ ಬೆಂಬಲ ಮತ್ತು ಮೃತ ವಿದ್ಯಾರ್ಥಿಗಳ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಕುಟುಂಬಗಳಿಗೆ ದುಃಖವನ್ನು ಬರಿಸುವ ಶಕಿ ದೊರೆಯಿಲಿ ಎಂದು ಪ್ರಾರ್ಥಿಸಿದರು. ಆರ್ಥಿಕ ನೆರವು ನೀಡುವ ಮೂಲಕ ಮಾನವೀಯ ಕಾರ್ಯವು .ಮಮತಾ ಪ್ರಭೂದೊರೆ ನಾಗೋಲಿ ಅವರು ಪ್ರತಿಯೊಂದು ಕುಟುಂಬಕ್ಕೂ ವೈಯಕ್ತಿಕವಾಗಿ10 ಸಾವಿರರೂಪಾಯಿಗಳ ಚೆಕ್ ನೀಡಿ ತಮ್ಮ ಅಹಾನುಭೂತಿಯನ್ನು ವ್ಯಕ್ತಪಡಿಸಿದರು. ಈ ಸಣ್ಣ ನೆರು ಅವರ ದೊಡ್ಡ ಮನಸ್ಸಿಗೆ ಸಾಕ್ಷಿಯಾಗಿದೆ.ಸಂದರ್ಭದಲ್ಲಿ ಮೋನಪ್ಪನಾಯಕ ಕ್ಯಾದಿಗ್ಗೇರಾ,ಮಕ್ಕಣ್ಣನಾಯಕ, ಬಂಡೆಪ್ಪ ಹೊನ್ನಕಾಟಮಳ್ಳಿ,ನಾಗರಾಜಬೇರಿ ಮಲ್ಲಿನಾಯಕನದೊಡ್ಡಿ, ಪ್ರಭುರಾಯಪಂದ್ಯಾನ, ನಾಗರಾಜನಾಯಕ ಅರಕೇರಾ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902277588 9880707587 9008787586





## ರಾಯಚೂರ ಮಾಜಿ ಶಾಸಕ ಸೈಯದ್ ಯಾಸಿನ್ ನಿಧನ : ಸಾರ್ವಜನಿಕ ಜೀವನಕ್ಕೆ ತುಂಬಲಾರದ ನಷ್ಟ – ಉದ್ಯಮಿ ಬಿ. ಅಬ್ದುಲ್ ಕರೀಂ ಸಾಬ್ ಕವಿತಾಳ




◆ ನೈಜ್ಯ ದೆಸೆ ನ್ಯೂಸ್

ರಾಯಚೂರು, ಜುಲೈ 12: ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು ಹಾಗೂ ರಾಯಚೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಸೈಯದ್ ಯಾಸಿನ್ ಅವರ ನಿಧನದ ಸುದ್ದಿ ತಿಳಿದು ತೀವ್ರ ದುಃಖವಾಗಿದೆ ಎಂದು ಖ್ಯಾತ ಉದ್ಯಮಿ ಬಿ. ಅಬ್ದುಲ್ ಕರೀಂ ಸಾಬ್ ಕವಿತಾಳ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಇಂದು ಬೆಳಗಿನ ಜಾವ ಅವರು ವಿಧಿವಶರಾಗಿರುವುದು ರಾಯಚೂರು ಜಿಲ್ಲೆ ಮಾತ್ರವಲ್ಲದೆ ರಾಜ್ಯದ ರಾಜಕೀಯ ಹಾಗೂ ಸಾರ್ವಜನಿಕ ಬದುಕಿಗೆ ತುಂಬಲಾರದ ನಷ್ಟವಾಗಿದೆ ಎಂದು ಅವರು ತಿಳಿಸಿದ್ದಾರೆ.ಸೈಯದ್ ಯಾಸಿನ್ ಅವರು ಜನಸಾಮಾನ್ಯರೊಂದಿಗೆ ಆತ್ಮೀಯವಾಗಿ ಬೆರೆತು ಬದುಕಿದ ಸರಳ, ಸಜ್ಜನ ಹಾಗೂ ಜನಪರ ನಾಯಕರಾಗಿದ್ದರು. ರಾಯಚೂರು ಜಿಲ್ಲೆಯ ಅಭಿವೃದ್ಧಿ, ಶಿಕ್ಷಣ, ಸಾಮಾಜಿಕ ನ್ಯಾಯ, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಶಾಂತಿ–ಸೌಹಾರ್ದದ ವಾತಾವರಣ ನಿರ್ಮಾಣಕ್ಕೆ ಅವರು ನೀಡಿದ ಕೊಡುಗೆ ಸದಾ ಸ್ಮರಣೀಯವಾಗಿರಲಿದೆ ಎಂದು ಅವರು ಹೇಳಿದ್ದಾರೆ.ಸೈಯದ್ ಯಾಸಿನ್ ಅವರು ಕಾಂಗ್ರೆಸ್‌ನ ಹಿರಿಯ ನಾಯಕರಾದ ಹಾಗೂ ಅವರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ತಮ್ಮ ರಾಜಕೀಯ ಜೀವನದುದ್ದಕ್ಕೂ ಸರ್ವಧರ್ಮ ಸಮಭಾವ, ಸಾಮಾಜಿಕ ಸಾಮರಸ್ಯ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದು ಜನಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದರು ಎಂದು ಬಿ. ಅಬ್ದುಲ್ ಕರೀಂ ಸಾಬ್ ಕವಿತಾಳ ಸ್ಮರಿಸಿದ್ದಾರೆ.ಜನಸಾಮಾನ್ಯರ ಕಷ್ಟ–ಸುಖಗಳಿಗೆ ಸದಾ ಸ್ಪಂದಿಸಿ, ಜನರ ಮನಸ್ಸಿನಲ್ಲಿ ಅಚ್ಚಳಿಯದ ಸ್ಥಾನ ಪಡೆದ ಜನನಾಯಕರು.ರಾಜಕೀಯವನ್ನು ಅಧಿಕಾರದ ಸಾಧನವಲ್ಲ, ಜನಸೇವೆಯ ಮಾಧ್ಯಮವೆಂದು ನಂಬಿ ಬದುಕಿದ ಅಪರೂಪದ ವ್ಯಕ್ತಿತ್ವ.ಬಡವರು, ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಅಲ್ಪಸಂಖ್ಯಾತರ ಪರವಾಗಿ ನಿರಂತರವಾಗಿ ಧ್ವನಿಯಾಗಿದ್ದ ನಾಯಕರು.ರಾಯಚೂರು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿ, ಅನೇಕ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಮುತ್ಸದ್ದಿ ರಾಜಕಾರಣಿ.ಸರ್ಕಾರಿ ಆಸ್ಪತ್ರೆ, ಪವರ್ ಗ್ರಿಡ್, ಬಸ್ ನಿಲ್ದಾಣ, ರೈಲ್ವೆ ಪ್ಲಾಟ್‌ಫಾರ್ಮ್ ಅಭಿವೃದ್ಧಿ, ಕುಡಿಯುವ ನೀರಿನ ಯೋಜನೆಗಳು, ಶಾಲಾ ಕಟ್ಟಡಗಳು ಸೇರಿದಂತೆ ಹಲವು ಶಾಶ್ವತ ಅಭಿವೃದ್ಧಿ ಕಾರ್ಯಗಳು ಅವರ ದೂರದೃಷ್ಟಿಯ ಫಲ.ಎಲ್ಲಾ ಸಮಾಜದ ಮುಖಂಡರು, ಧಾರ್ಮಿಕ ನಾಯಕರು ಹಾಗೂ ವಿವಿಧ ಸಂಘಟನೆಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿ ಸಾಮಾಜಿಕ ಸಾಮರಸ್ಯವನ್ನು ಬಲಪಡಿಸಿದ ನಾಯಕರು.ಸರಳತೆ, ಸಜ್ಜನಿಕೆ ಮತ್ತು ಪ್ರಾಮಾಣಿಕತೆಯಿಂದ ರಾಜಕೀಯ ಜೀವನ ನಡೆಸಿ ಎಲ್ಲರ ಗೌರವಕ್ಕೆ ಪಾತ್ರರಾದವರು.ಪಕ್ಷಾತೀತವಾಗಿ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದ ವಿಶಾಲ ಹೃದಯದ ಜನಪ್ರತಿನಿಧಿ.ಸಾವಿರಾರು ಯುವಕರಿಗೆ ಉದ್ಯೋಗ, ಶಿಕ್ಷಣ ಮತ್ತು ಸ್ವಾವಲಂಬನೆಯ ದಾರಿಯನ್ನು ತೋರಿಸಿದ ಮಾರ್ಗದರ್ಶಕರಾಗಿದ್ದರು. ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ, ಅಧಿಕಾರಿಗಳ ಮೂಲಕ ಪರಿಹಾರ ಕಲ್ಪಿಸುವಲ್ಲಿ ಸದಾ ಮುಂಚೂಣಿಯಲ್ಲಿದ್ದ ಜನನಾಯಕರು. ಅಭಿವೃದ್ಧಿ ಮತ್ತು ಮಾನವೀಯ ಮೌಲ್ಯಗಳ ಸಮನ್ವಯದಿಂದ ರಾಯಚೂರಿನ ರಾಜಕೀಯ ಇತಿಹಾಸದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ನಾಯಕರು.ಅವರ ನಿಧನದಿಂದ ರಾಯಚೂರು ಜಿಲ್ಲೆಯು ಅನುಭವಿ ರಾಜಕಾರಣಿ, ಅಭಿವೃದ್ಧಿಯ ಹರಿಕಾರ ಹಾಗೂ ಮಾನವೀಯ ನಾಯಕನನ್ನು ಕಳೆದುಕೊಂಡಿದೆ. ಅವರ ಆದರ್ಶಗಳು, ಅಭಿವೃದ್ಧಿಯ ಕನಸುಗಳು ಮತ್ತು ಜನಸೇವೆಯ ಬದ್ಧತೆ ಮುಂದಿನ ಪೀಳಿಗೆಗೆ ಸದಾ ಸ್ಫೂರ್ತಿಯಾಗಿರಲಿದೆ. ಅವರ ಅಗಲಿಕೆಯಿಂದ ಜಿಲ್ಲೆಯ ಜನತೆ ಅನುಭವಿ ಜನನಾಯಕನನ್ನು ಕಳೆದುಕೊಂಡಂತಾಗಿದೆ. ಅವರ ಆದರ್ಶಗಳು, ಸರಳ ವ್ಯಕ್ತಿತ್ವ ಹಾಗೂ ಸಮಾಜಮುಖಿ ಸೇವೆಗಳು ಸದಾ ಸ್ಮರಣೀಯವಾಗಿರಲಿವೆ ಎಂದು ಅವರು ಹೇಳಿದ್ದಾರೆ.ದಿವಂಗತ ಸೈಯದ್ ಯಾಸಿನ್ ಅವರ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲಿ ಹಾಗೂ ಅವರ ಕುಟುಂಬದ ಸದಸ್ಯರು, ಬಂಧು–ಬಳಗ, ಅಭಿಮಾನಿಗಳು ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಬಿ. ಅಬ್ದುಲ್ ಕರೀಂ ಸಾಬ್ ಕವಿತಾಳ ತಮ್ಮ ಸಂತಾಪ ಸಂದೇಶದಲ್ಲಿ ಪ್ರಾರ್ಥಿಸಿದ್ದಾರೆ.




## ಅರ್ಜಿದಾರರ ಪೋಷಕರು ಕಳೆದ ಎಸ್‌ಐಆರ್ ಭಾಗವಾಗಿದ್ದರೇ?: ಮತದಾರರ ನೋಂದಣಿ ಫಾರ್ಮ್‌ಗೆ ಹೊಸ ವಿಭಾಗ ಸೇರ್ಪಡೆ

◆ ನೈಜ್ಯ ದೆಸೆ ನ್ಯೂಸ್



ಹೊಸದಿಲ್ಲಿ,ಜು.12: ಚುನಾವಣಾ ಆಯೋಗವು 'ಫಾರ್ಮ್ 6'ರ ಆನ್‌ಲೈನ್ ಆವೃತ್ತಿಗೆ ಹೊಸ ವಿಭಾಗವೊಂದನ್ನು ಸೇರಿಸಿದ್ದು, ಇದರಲ್ಲಿ ಅರ್ಜಿದಾರರು ಅಥವಾ ಅವರ ಪೋಷಕರು ಕಳೆದ ಬಾರಿಯ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿದ್ದರೇ ಎಂದು ಕೇಳಲಾಗಿದೆ ಎಂದು ಸುದ್ದಿಸಂಸ್ಥೆಯು ರವಿವಾರ ವರದಿ ಮಾಡಿದೆ.ಈ ಹೊಸ ಘೋಷಣೆಯು ಇಅಖಓಇಖ ಪೋರ್ಟಲ್‌ನಲ್ಲಿ ಲಭ್ಯವಿರುವ ಆನ್‌ಲೈನ್ ಫಾರ್ಮ್ 6ರಲ್ಲಿ ಮಾತ್ರಇದೆ. ಡೌನ್‌ಲೋಡ್ ಮಾಡಬಹುದಾದ ಶಾಸನಬದ್ಧ ಫಾರ್ಮ್‌ನ ಆವೃತ್ತಿಯಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ.18 ವರ್ಷ ತುಂಬಿದ ನಂತರ ಅಥವಾ ಭಾರತೀಯ ಪೌರತ್ವ ಪಡೆದ ನಂತರ ಅಥವಾ ಮತದಾರರ ಪಟ್ಟಿಯಿಂದ ತಮ್ಮ ಹೆಸರು ಕೈಬಿಟ್ಟು ಹೋಗಿದ್ದರೆ ಅಂತಹ ವ್ಯಕ್ತಿಗಳು ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳಲು ಫಾರ್ಮ್ 6ರ ಮೂಲಕ ಅರ್ಜಿ ಸಲ್ಲಿಸಬೇಕಾಗುತ್ತದೆ.ಜೂನ್ 2025 ರಲ್ಲಿ ಚುನಾವಣಾ ಆಯೋಗವು ವಿಶೇಷ ತೀವ್ರ ಪರಿಷ್ಕರಣೆಯನ್ನು ಪ್ರಾರಂಭಿಸಿದಾಗಿನಿಂದ ಈ ಫಾರ್ಮ್ ಅನ್ನು ತಿದ್ದುಪಡಿ ಮಾಡಲಾಗಿಲ್ಲ. ಪ್ರಜಾಪ್ರತಿನಿಧಿ ಕಾಯ್ದೆ 1950ರ ಸೆಕ್ಷನ್ 28ರ ಪ್ರಕಾರ, ಫಾರ್ಮ್ 6 ಸೇರಿದಂತೆ ಚುನಾವಣಾ ಫಾರ್ಮ್‌ಗಳಿಗೆ ಸಂಬಂಧಿಸಿದ ನಿಯಮಗಳನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರವಿದೆ.ಈ ಹೊಸ ಘೋಷಣೆಯನ್ನು ಕಡ್ಡಾಯ ಎಂದು ಹೇಳಿರದಿದ್ದರೂ ಅರ್ಜಿದಾರರು ಅದನ್ನು ಭರ್ತಿ ಮಾಡದೆ ಆನ್‌ಲೈನ್ ಫಾರ್ಮ್ ಅನ್ನು ಸಲ್ಲಿಸಲು ಸಾಧ್ಯವಾಗುತ್ತಿಲ್ಲ ಎಂದು ವರದಿಯು ತಿಳಿಸಿದೆ.ಹೊಸದಾಗಿ ಸೇರಿಸಲಾದ ವಿಭಾಗವು ಅರ್ಜಿದಾರರಿಗೆ ಕೆಳಗಿನ ಮೂರು ಆಯ್ಕೆಗಳಲ್ಲಿ ಒಂದನ್ನು ಗುರುತು ಮಾಡಲು ಕೇಳುತ್ತದೆ:ಕಳೆದ ಎಸ್‌ಐಆರ್‌ನ ಮತದಾರರ ಪಟ್ಟಿಯಲ್ಲಿ ನನ್ನ ಹೆಸರಿದೆ ನನ್ನ ಪೋಷಕರ ಹೆಸರು (ತಂದೆ,ತಾಯಿ,ಅಜ್ಜ,ಅಜ್ಜಿ) ಕಳೆದ ಎಸ್‌ಐಆರ್ ನ ಮತದಾರರ ಪಟ್ಟಿಯಲ್ಲಿದೆ ಕಳೆದ ಎಸ್‌ಐಆರ್ ನ ಮತದಾರರ ಪಟ್ಟಿಯಲ್ಲಿ ನನ್ನ ಹೆಸರಾಗಲಿ ನನ್ನ ಪೋಷಕರ ಹೆಸರಾಗಲಿ ಇಲ್ಲಮೊದಲ ಎರಡು ಆಯ್ಕೆಗಳನ್ನು ಆರಿಸಿಕೊಳ್ಳುವವರು ಹಿಂದಿನ ಮತದಾರರ ಪಟ್ಟಿಯಿಂದ ತಮ್ಮ ವಿಧಾನಸಭಾ ಕ್ಷೇತ್ರ, ಬೂತ್ ಸಂಖ್ಯೆ ಮತ್ತು ಕ್ರಮ ಸಂಖ್ಯೆಯಂತಹ ವಿವರಗಳನ್ನು ಒದಗಿಸಬೇಕಾಗುತ್ತದೆ. ಒಂದು ವೇಳೆ ಅರ್ಜಿದಾರರ ಬಳಿ ಈ ವಿವರಗಳು ಇಲ್ಲದಿದ್ದರೆ ಅವರು ಏನು ಮಾಡಬೇಕು ಎನ್ನುವುದು ಸ್ಪಷ್ಟವಾಗಿಲ್ಲ.